ಅಪರಂಜಿ

ಮಾರ್ಚ್ 2003

ತಿಳಿನಗೆಯ ಕಾರಂಜಿ



ಅಪರಂಜಿ ಕಿಡಿ

ಶಿವಕುಮಾರ್

ಭಕ್ತ

ಗೋಪಾಲಿ

ಸೂರಿ ಹಾರ್ದಳ್ಳಿ

ಗಜಾನನ ಟಿ. ಹೆಗ್ಡೆ

ವಿಜಯ ಸಚ್ಚಿದಾನಂದ

ಶಂಸ ಐತಾಳ

ಅ.ರಾ.ಸೇ.

ಎಸ್ಸಾರ್ಮೂರ್ತಿ

ಸೂರಿ ಹಾರ್ದಳ್ಳಿ

ಬಿಡಿ ಪ್ರತಿ: ರೂ. 5.00



ಗೌರವ ಸಲಹೆಗಾರರು:	ಚಂದಾ ವಿವರ:
ಶ್ರೀ ಅ.ರಾ.ಸೇ.	ಬಿಡಿ ಪ್ರತಿ: ರೂ. 5.00
ಶ್ರೀ ಶೇಷಗಿರಿ	ವಾರ್ಷಿಕ ಚಂದಾ ರೂ. 60
ಸಂಪಾದಕ:	ಹತ್ತು ವರ್ಷದ ಚಂದಾ ರೂ. 500
ಶಿವಕುಮಾರ್	
ನಿರ್ವಹಣೆ:	Ph: 3345259
ಬೇಲೂರು ರಾಮಮೂರ್ತಿ	email: aparanji@hotmail.com
ಕೃಷ್ಣ ಸುಬ್ಬರಾವ್	website: aparanjimag.com

ವಿಳಾಸ: ಕೊರವಂಜಿ ಅಪರಂಜಿ ಟ್ರಸ್ಟ್, 36, 6ನೇ ಮುಖ್ಯರಸ್ತೆ, ಮಲ್ಲೇಶ್ವರಂ, ಬೆಂಗಳೂರು - 560 003 (ಕೆಲಸದ ವೇಳೆ: ಬೆಳಿಗ್ಗೆ 8 ರಿಂದ 10 ಗಂಟೆಯವರೆಗೆ)

ಈ ಸಂಚಿಕೆಯಲ್ಲಿ

ಸಂಪುಟ 20 ಮಾರ್ಚ್ - 2003 ಸಂಚಿಕೆ - 6

ಮುದ್ರಣ: ಇಂಪ್ರೆಶನ್ಸ್, ಬೆಂಗಳೂರು - 3 ಅಕ್ಷರ ಜೋಡಣೆ: ಒಮೇಗಾ ಲೇಸರ್ ಟೆಕ್, ಬೆಂಗಳೂರು - 27

ಶ್ರದ್ಧಾಂಜಲಿ

ಹಾಸ್ಯವನ್ನು ಬಾಳಿಸುವುದಕ್ಕೂ ಬಳಸಿಕೊಂಡೇ ಬರುವುದು ಆರೋಗ್ಯಕರ. ಆರೋಗ್ಯ ಕೆಟ್ಟಾಗ ನಮ್ಮ ಸಮತೋಲನ ಕಳೆದುಕೊಂಡು ಮಂಕಾಗಿ ಕುಳಿತುಕೊಳ್ಳುವುದೇ ಹೆಚ್ಚು. ಸದಾ ನಗ್ತಾ ಇರಿ ಅಂತಾ ಹೇಳುವ ಅನೇಕರು ತಮ್ಮ ಮನೆಯಲ್ಲಿ ಸಿಡುಕುತ್ತಾ ಇರುವುದರ ಬಗ್ಗೆ ಕೇಳಿದ್ದೇವೆ. ಆದರೆ ಹಾಸ್ಯ ಪರಿಚಾರಿಕೆ ಮಾಡುವ ನಿಜವಾದ ಧೀಮಂತ ವ್ಯಕ್ತಿ ತನ್ನ ಜೀವನದಲ್ಲಿ ಅತ್ಯಂತ ಆತಂಕಕಾರಿ ಖಾಯಿಲೆಯನ್ನು ವೈದ್ಯರಿಗೆ / ಮನೆಯವರಿಗೆ ಮಾತ್ರ ತಿಳಿಸಿ ಮಿಕ್ಕವರಿಗೆಲ್ಲಾ ಏನು ಗೊತ್ತಾಗದ ಹಾಗೆ ಜೀವನ ನಡೆಸಿ ಎಲ್ಲರನ್ನು ನಗಿಸುತ್ತಾ ವಿಶ್ವಾಸದಿಂದ ಮಾತನಾಡಿಸುವ ವ್ಯಕ್ತಿಯಾಗಬೇಕು. ಇದು ಸಾಧ್ಯ ಎಂದು ತೋರಿಸಿದ ನಮ್ಮ ನಿಮ್ಮೆಲ್ಲರ ಗೆಳೆಯ - ಹಾಸ್ಯಲೇಖಕ ಸಾ.ಕೃ. ಪ್ರಕಾಶ್ ಇನ್ನಿಲ್ಲ. ಇವರು ಅನೇಕ ಹಾಸ್ಯಕೃತಿಗಳು, ಪತ್ತೇದಾರಿ ಕಾದಂಬರಿಗಳು, ಕ್ರೈಮ್ಸ್, ಥ್ರಿಲ್ಲರ್ಸ್ ಬಿಟ್ಟು ಹೋಗಿದ್ದಾರೆ.

ವೃತ್ತಿಯಲ್ಲಿ ಎಲೆಕ್ಟ್ರಿಕ್ ಇಂಜಿನೀಯರ್ ಆಗಿ ದುಡಿದು, ವ್ಯಾಪಾರಕ್ಕಿಳಿದು ಸಾಹಿತ್ಯವನ್ನು ಉಳಿಸಿಕೊಂಡು ಬೆಳೆಸಿಕೊಂಡು, ಮಲ್ಲಿಗೆ ಮಾಸಪತ್ರಿಕೆಯ ಸಂಪಾದಕತ್ವದ ಜವಾಬ್ದಾರಿ ಹೊತ್ತು ಅನೇಕ ಲೇಖಕರನ್ನು ಹುಟ್ಟುಹಾಕಿ ಲೇಖಕ - ಪ್ರಕಾಶಕರ ಸೇತುವೆಯಾಗಿ ಸಂತೋಷ ಸಂಭ್ರಮ ಪಡುತ್ತಿದ್ದ ಆದರ್ಶ ಜೀವಿ. 23ನೇ ತಾರೀಖು ಫೆಬ್ರವರಿ (ನಿಧನರಾದದ್ದು ಜನವರಿ 23) ಅವರ ಮನೆಯಲ್ಲಿ ಸೇರಿದ ಪ್ರಕಾಶರ ಬಳಗದ ಸಂಪಾದಕರು, ಪ್ರಕಾಶಕರು, ಲೇಖಕರು ಹಾಗೂ ಇತರ ಸ್ನೇಹಿತರು ತಮ್ಮ ಅನುಭವಗಳನ್ನು ಹಂಚಿಕೊಂಡರು. ಹಾಸ್ಯಬ್ರಹ್ಮ ಬಹಳ ವಿಶಿಷ್ಟವಾಗಿ ನೆನಪನ್ನು ಹಂಚಿಕೊಳ್ಳಲು ಅನುವು ಮಾಡಿಕೊಟ್ಟಿತು. ಸಾಧಾರಣವಾಗಿ ಸತ್ತವರಿಗೆ ಗೌರವ ಸಲ್ಲಿಸಲು ಮೌನ ಆಚರಿಸುತ್ತಾರೆ. ಆದರೆ ಬಂದವರೆಲ್ಲಾ ಮಾತನಾಡಲು, ಅಲ್ಪ ಸ್ವಲ್ಪವಾದರೂ ಇದುವರೆಗೂ ಪ್ರಕಾಶರ ಮುಂದೆ ಹೇಳಲಾಗದ್ದನ್ನು ಧೈರ್ಯವಾಗಿ ಹೇಳಿದರು. ಆರ್ಥಿಕ ಸಹಾಯ ಹಸ್ತ ನೀಡಿದರೂ ಅವರಿಗೆ Thanks ಹೇಳಬಾರದು ಎನ್ನುವ ವ್ಯಕ್ತಿ. ಪ್ರಚಾರ ಬೇಡ ಎನ್ನುವ ಪ್ರಕಾಶ. ಜೋಕ್ಸ್‌ಗಳನ್ನು ಬಹಳ ರಸವತ್ತಾಗಿ ಹಾಗೂ ಆಕರ್ಷಕವಾಗಿ ಬರೆಯುವ ಕಲೆಯನ್ನು ರೂಢಿಸಿಕೊಂಡಿದ್ದರು. ಹಾಸ್ಯ ಸುಧಾ, ಹಾಸ್ಯ ತರಂಗ, ಹಾಸ್ಯ ಪಲ್ಲವಿ, ರೆಮ್ಮಿ ಅಂಡ್ ಶೋ, ಲರ್ನಿಂಗ್ ಲೈಸೆನ್ಸ್ ಕೆಲವು ಹಾಸ್ಯ ಸಂಕಲನಗಳು (ಜೋಕ್ಸ್) ಇದಲ್ಲದೆ ಮತ್ಸರ, ಸಾವಿಗೆ ಸಪ್ತಪದಿ, ಮಿನಿಸ್ಟ್ರು ಸುಳ್ಳು ಹೇಳ್ತಾರಾ ಇನ್ನಿತರ ಪುಸ್ತಕಗಳು. ಸುಮಾರು 60ಕ್ಕೂ ಹೆಚ್ಚು ಕೃತಿಗಳನ್ನು ಕೊಟ್ಟಿದ್ದಾರೆ.

ಸಂಭಾವನೆ, ಸಂಪಾದನೆ ಬಗ್ಗೆ ಹೆಚ್ಚು ತಲೆ ಕೆಡಿಸಿಕೊಳ್ಳದೆ ಪ್ರತಿಭೆಗಳನ್ನು ಗುರುತಿಸಿ ಪ್ರೋತ್ಸಾಹಿಸುವುದೇ ಮುಖ್ಯವೆಂದು ನಂಬಿದ್ದು, ಹಾಗೆ ನಡೆದುಕೊಂಡರು.

ಐವತ್ತು ವರ್ಷವಾದ ಮೇಲೆ ಹೊಸ ಸ್ನೇಹಿತರು ಹುಟ್ಟಿಕೊಳ್ಳೋದು ದುಸಾಧ್ಯವೆಂದು ನಂಬಿದ್ದ ನನಗೆ ಬಹಳ ಸ್ವಲ್ಪ ಕಾಲದಲ್ಲಿ ಅತ್ಯಂತ ಆತ್ಮೀಯ ಸ್ನೇಹಿತರಾಗಿ, ನನ್ನ ನಂಬಿಕೆಗಳನ್ನೆಲ್ಲಾ ಬುಡಮೇಲು ಮಾಡಿದರು. ಅವರಿಗೆ ಏನಾಗಿತ್ತು, ಎಲ್ಲಿ ತಮ್ಮ ಕೊನೆಯ ಉಸಿರನ್ನು ಎಳೆದರು ಎಂಬುದರ ಬಗ್ಗೆ ನಾವೇ ಪತ್ತೆ ಮಾಡಲಿ ಎಂದುಕೊಂಡುಬಿಟ್ಟಿರಬೇಕು. ಪ್ರಕಾಶರಿಗೆ ಪ್ರಿಯವಾದ ಪ್ರಾಕಾರ (ಸಾಹಿತ್ಯ) ಅದೇ ಅಲ್ಲವೆ? ''ಪ್ರಕಾಶ, ನಾವು ಪತ್ತೇದಾರಿ ಆಟದಲ್ಲಿ ನಿಮ್ಮಷ್ಟು ನಿಪುಣರಲ್ಲ, ಸೋಲನ್ನು ಒಪ್ಪಿಕೊಳ್ಳುತ್ತೇವೆ. ನಿಮ್ಮ ಧೈರ್ಯ, ಸ್ಥೈರ್ಯ ನಮಗೂ ಬರಲಿ ಎಂಬುದೇ ನಮ್ಮೆಲ್ಲರ ಮಹದಾಸೆ-''

ಅಪರಂಜಿ ಬಳಗ ಹಾಗೂ ಎಲ್ಲಾ ಹಾಸ್ಯಲೇಖಕರ ಹ್ಯಾಟ್ಸ್ ಆಫ್ ನಿಮಗೆ.

– ಕೃಷ್ಣ ಸುಬ್ಬರಾವ್



○ ಪ್ರಕಾಶ್

ಬೆಂಗಳೂರಿನಲ್ಲಿ ಬಸ್ಸಿನ ಮೇಲೆ ಕಂಡದ್ದು:
"Body built by BMTC'
'ಎಚ್ಚರಿಕೆ.'

ತೀರ ಹೀಗೆ ಬರೆಯಬಾರದು!!

★★★

ಕಾಂಗ್ರೆಸ್ ಅಧ್ಯಕ್ಷರಾಗಿ ಪೂಜಾರಿ ನೇಮಕ
- ಸುದ್ದಿ

ಈಗ ದೇವರ ನೇಮಕ ಆದರೆ ಸಾಕು!!

★★★

'ಏರೋ' ಇಂಡಿಯಾ ಪ್ರದರ್ಶನ
- ಶೀರ್ಷಿಕೆ

ಬೆಲೆಗಳು 'ಇಳಿಯೋ' ಇಂಡಿಯಾ ಆದರೆ ಸಾಕು!!

★★★

ನಕಲಿ ಸಹಿ ಮಾಡಿ ರೇಷ್ಮೆ ಬೆಳೆಗಾರರ ಹಣ ನುಂಗಿದ ಅಧಿಕಾರಿಗಳು
- ಸುದ್ದಿ

Smooth as Silk??

★★★

ಅರೆಕಾಲಿಕ ರಾಜಕೀಯ ಸ್ವೀಕರಿಸಲು ಸಾಹಿತಿಗಳಿಗೆ ಕೃಷ್ಣ ಕರೆ
- ಪತ್ರಿಕೆ

ಯಾಕೆ Fiction ಇನ್ನೂ ಹೆಚ್ಚಲಿ ಅಂತಲೋ??!

★★★

ನಾನೊಬ್ಬನೇ ಆಡಿದರೆ ಸಾಲದು
- ಟೆಂಡೂಲ್ಕರ್

ಅಂಪೈರುಗಳೆಲ್ಲ ಅನುಮೋದಿಸಿದರಂತೆ!!

★★★

ಪೋಲೀಸರಿಗೆ ಶೆರ್ಲಾಕ್ ಹೋಂಸ್ ಪುಸ್ತಕಗಳ ವಿತರಣೆ
- ಸುದ್ದಿ

ನಂ ಪೋಲೀಸರ ಗಾತ್ರ ನೋಡಿದರೆ, Alimentary, My Dear Watson! ಅನ್ನಬಹುದು!!

★★★

ಕವನಗಳಲ್ಲಿ ಪ್ರವಾಸ ಕಥನ ಬರೆಯುವುದು ಕಷ್ಟ
- ಹೇಳಿಕೆ

ಹೌದು, ಅದು 'ಪ್ರಯಾಸ' ಕಥನ!!

★★★

ರಸ್ತೆ ಅಗೆತ ಮಾಡುವವರು ಒಂದು ವಾರದ ಒಳಗಾಗಿ ಅದನ್ನು ಮೂಲ ರೂಪಕ್ಕೆ ತರಬೇಕು
- ಆಯುಕ್ತರು

ಅದೇ ಕಷ್ಟ!!

★★★

ಅನುಗಾಲವಿರಲಿಕ್ಕೆ ನಾವಿಲ್ಲಿ ಬಂದಿಲ್ಲ
ಅದಕಾಗಿ ರಹದಾರಿಯನ್ನೇನೂ ತಂದಿಲ್ಲ
ಇರುವುದೊಂದು ನಾಲ್ಕೋ ಎಂಟೋ ದಿನ
ಹೀಗಿರುವಾಗ ಹರಿಸಬಾರದೆ ನಗೆ ದಿನಾ ದಿನಾ

- ಬೇಲೂರು ರಾಮಮೂರ್ತಿ

ನಮ್ಮ ನಮ್ಮಲ್ಲಿ

ನನಗೊಬ್ಬ ಗೆಳೆಯ ಇದ್ದಾನೆ. ಅವನಿಗೆ ಭಗವದ್ಗೀತೆಯ ಹುಚ್ಚು. ನೀವು ಎಂ.ಟಿ.ಆರ್. ನಲ್ಲಿ ಕೂತು ಬಿಸಿ ಬಿಸಿ ಮಸಾಲೆ ದೋಸೆಯನ್ನ ಚಪ್ಪರಿಸೋ ಹಾಗೆ ಆತನಿಗೆ ಭಗವದ್ಗೀತೆ, ಉಪನಿಷತ್ತುಗಳನ್ನ ಚಪ್ಪರಿಸಿಕೊಂಡು ಓದುವ ಹವ್ಯಾಸ. ಆತನದ್ದು ಅನುಕಂಪದ ಹೃದಯ. ಸಹಾನುಭೂತಿಯ ಪ್ರಕೃತಿ. ಅವನೊಂದಿಗೆ ನೀವು ಯಾವ ಸಮಸ್ಯೆಯನ್ನು ಹಂಚಿಕೊಂಡರೂ ಅದಕ್ಕೆ ತಕ್ಕ ಶ್ಲೋಕ ಅವನಿಂದ ಹೊರ ಹೊಮ್ಮುತ್ತದೆ. ಅನೇಕ ವೇಳೆ ಇಂತಹ ಶ್ಲೋಕಗಳು ನನಗೆ ಸಾಂತ್ವನ ನೀಡುವುದರಲ್ಲಿ ಯಶಸ್ವಿಯಾಗಿವೆ ಎಂಬುದನ್ನು ನಾನೂ ಒಪ್ಪುತ್ತೇನೆ. ಒಂದೇ ತೊಂದರೆಯೆಂದರೆ ಅವನೊಡನೆ ಲೋಕಾಭಿರಾಮದ ಮಾತುಗಳನ್ನು ಆಡುವಾಗಲೂ ಅವ ಬಹು ಸುಲಭವಾಗಿ ಈ ''ಗೀತೆ ಮೋಡ್''ಗೆ ಜಾರಿಬಿಡುತ್ತಾನೆ. ಉದಾಹರಣೆಗೆ ''ಇವತ್ತು ವರ್ಲ್ಡ್‌ಕಪ್‌ನಲ್ಲಿ ಇಂಡಿಯಾ, ಇಂಗ್ಲೆಂಡ್ ಮೇಲೆ ಗೆಲ್ತಾರೇನೋ, ನಿನಗೇನನ್ನಿಸುತ್ತೆ?'' ಎಂದು ಕೇಳಿದರೆ ಅವನು ''ಸೋಲು ಗೆಲುವು ಎಲ್ಲಾ ಭ್ರಮೆ. ಮನಸ್ಸಿನ ಕಲ್ಪನೆ. ಗೀತೆಯಲ್ಲಿ ಹೇಳಿರೋ ಹಾಗೆ ಕರ್ಮಣ್ಯೇ...'' ಎಂದು ಪ್ರಾರಂಭಿಸಿ ಸುಮಾರು ಹದಿನೈದು ನಿಮಿಷ ಕೊರೆಯುತ್ತಾನೆ.

ಈ ನನ್ನ ಗೆಳೆಯನ ಸಾತ್ವಿಕ ಮನೋಭಾವವನ್ನು ಅವನ ಪ್ರತಿಯೊಂದು ನಡವಳಿಕೆಯಲ್ಲೂ ಕಾಣಬಹುದು. ಯಾವ ವಿಷಯಕ್ಕೂ ಆತ ದನಿ ಏರಿಸಿ ಮಾತನಾಡಲಾರ. ಯಾರ ಬಗ್ಗೆಯೂ ಎಂದೂ ಅಸೂಯೆಯ, ತಿರಸ್ಕಾರದ ಮಾತುಗಳನ್ನು ಅವನು ಆಡಿದ್ದು ನೆನಪಿಲ್ಲ. ಕೋಪ ಎಂಬುದು ಅವನ ಹತ್ತಿರ ಎಂದೂ ಸುಳಿಯದು. ಆದರೆ ಇದಕ್ಕೆ ಮಾತ್ರ ಒಂದು ಅಪವಾದವಿದೆ. ಆತ ತನ್ನ ಮಿನಿಮಮ್ ಹದಿನೈದು ನಿಮಿಷಗಳ ಸೆಷನ್ ತೆಗೆದುಕೊಂಡಾಗ ನೀವು ಅಪ್ಪಿ ತಪ್ಪಿ ಆಕಳಿಸಿಬಿಟ್ಟರೆ ಮುಗಿಯಿತು. ಆತ ತಣ್ಣನೆಯ ಕೋಪದಿಂದ ''ನೀವು ಏನೇ ಮಾಡಿ, ಇನ್ನೊಬ್ಬರು ಮಾತನಾಡುತ್ತಿರುವಾಗ ಆಕಳಿಸಬಾರದು. ಹಾಗಂತ ಭಾಷೆ ಕೊಡಿ'' ಅಂತ ಕೂತುಬಿಡುತ್ತಾನೆ.

ನನ್ನ ಇನ್ನೊಬ್ಬ ಗೆಳೆಯ ಇವನಂತಿಲ್ಲ. ಗೀತೆ ಇಲ್ಲದೇ ಆತ ವರ್ಷಗಟ್ಟಲೆ ಬದುಕಬಲ್ಲ. ಆತನೂ ಸಜ್ಜನ, ಮಿತಭಾಷಿ, ಯಾವಾಗಲೂ "Low Key" ಮೋಡ್‌ನಲ್ಲೇ ಇರುವ ಇವನಿಗೆ ಬೆಂಗಳೂರಿನ ರೇಸಿಂಗ್ ಸೀಜನ್ ಶುರುವಾಯಿತೆಂದರೆ ಕಣ್ಣರಳುತ್ತದೆ. ಅವತ್ತು ಓಡುವ ಕುದುರೆಯ ಅಪ್ಪ ಅಮ್ಮ ಅಜ್ಜ ಅಜ್ಜಿ ಯಾರು? ಹಿಂದಿನ ಹತ್ತು ವರ್ಷಗಳಲ್ಲಿ ಅದರ ಪಿತೃಗಳು ಸಾಧಿಸಿದ ಸೋಲು, ಗೆಲುವುಗಳು ಇವೆಲ್ಲವನ್ನೂ ಅವನು ವಿವರಿಸುವ ಉತ್ಸಾಹವನ್ನು ಕೇವಲ ಪದಗಳಲ್ಲಿ ವಿವರಿಸುವುದು ಅಸಾಧ್ಯ. ಈ ವಿವರಣೆಯ ಮಧ್ಯೆ ಕೇಳುಗ ಅಕಸ್ಮಾತ್ತಾಗಿ ಆಕಳಿಸಿದರೂ ಇವನಿಗೆ ಏನೂ ಅನ್ನಿಸುವುದಿಲ್ಲ. ಅಷ್ಟು ಜೀನಿಯಲ್ ಈತ.

ಮೊನ್ನೆ ನನ್ನ ಬಾಲ್ಯದ ಗೆಳತಿ ಸುಧಾ ಊರಿಗೆ ಬಂದಿದ್ದಳು. ಚಿಕ್ಕಂದಿನಲ್ಲಿ ನಾವೆಲ್ಲಾ ಒಬ್ಬರನ್ನು ಬಿಟ್ಟು ಒಬ್ಬರು ಇರುತ್ತಿರಲಿಲ್ಲ. ಈಗ ಅವಳು ಅಮೇರಿಕೆಯಲ್ಲಿ ಖ್ಯಾತ ಡಾಕ್ಟರು. ಸಂಭ್ರಮದ ಭೇಟಿಯ ನಂತರ, ''ನಿನ್ನ ಹವ್ಯಾಸಗಳೇನು? ಉಪನಿಷತ್ತು, ಗೀತೆ ಇವುಗಳ ಜೊತೆ ಏನಾದ್ರೂ ಸಂಪರ್ಕ...'' ಅಂತ ಕೇಳಿದೆ.

''ಅದಕ್ಕೆಲ್ಲಾ ಟೈಮೇ ಇಲ್ಲ ಕುಮಾರ್, ಬರ್ಡ್ ವಾಚಿಂಗ್, ಗಾರ್ಡನಿಂಗ್ ಮತ್ತು ಅಸ್ಟ್ರಾನಮಿ ನನ್ನ ಮೂರು ಹವ್ಯಾಸಗಳು. ಅವುಗಳಲ್ಲಿ ಆಸಕ್ತಿ ಇರೋ ಗುಂಪು ವಾರಕ್ಕೊಂದು ದಿನ ಒಂದು ಕಡೆ ಒಟ್ಟುಗೂಡ್ತೀವಿ. ನನಗೆ ಇರೋ ವಿರಾಮದ ವೇಳೆ ಎಲ್ಲಾ ಇದರಲ್ಲೇ ಕಳೆದುಹೋಗುತ್ತೆ. ಇದರ ಜೊತೆಗೆ ಹಲವು ಪಾರಕೀಟ್‌ಗಳನ್ನೂ ಸಾಕಿಕೊಂಡಿದ್ದೇನೆ. ಒಟ್ಟಿನಲ್ಲಿ ನನ್ನದು ಬಿಡುವೇ ಇಲ್ಲದ ಜೀವನ. ನೀನು ಫ್ಯಾಕ್ಟರಿ ಮಾರಿಬಿಟ್ಟೆ ಅಂತ ಕೇಳಿದೆ. ಈಗ ಹೇಗೆ ಕಾಲ ಕಳೀತಾ ಇದ್ದೀಯಾ?'' ಅಂತ ವಿಚಾರಿಸಿದಳು.

''ಹವ್ಯಾಸ ಅಂತ ಸ್ಪೆಸಿಫಿಕ್ ಆಗಿ ಏನೂ ಇಲ್ಲ.'' ಅಂತ ಹೇಳಿ, ನಂತರ ಮೇಲೆ ತಿಳಿಸಿದ ನನ್ನ ಗೆಳೆಯರ ವಿಷಯ ಅವಳಿಗೆ ಹೇಳಿದೆ. ''ಅಂತೂ ನಾನು ನೋಡಿರೋರೆಲ್ಲಾ ಯಾವುದೋ ಒಂದು ಹವ್ಯಾಸಕ್ಕೆ ಜೋತುಬಿದ್ದು ಕಣ್ಣರಳಿಸಿಕೊಂಡು ಸಂತಸದಿಂದ ಇದ್ದಾರೆ. ನೀನೂ ಕೂಡ ಮೂರು ಹಾಬಿ ಇಟ್ಕೊಂಡು ಜುಂ ಅಂತ ಇದ್ದೀಯಾ ನಾನೇನು ಮಾಡಬಹುದು ಅಂತೀಯಾ'' ಅಂತ ಅವಳನ್ನೇ ಕೇಳಿದೆ.

''ಬರೀತಿನಿ ಅಂತೀಯಲ್ಲಾ ಅದನ್ನೇ ಮಾಡಬಹುದಲ್ಲಾ. ಯಾವುದೇ ಹಾಬಿಯನ್ನ ಆರಿಸಿಕೊಳ್ಳುಕ್ಕೆ ಮುಂಚೆ ಅದರ ಬಗ್ಗೆ ತೀವ್ರ ಆಸಕ್ತಿ ಇರಬೇಕಾದ್ದು ಮುಖ್ಯ. ಎಂದಿಗೂ ಆ ಆಸಕ್ತಿ ಕುಂದಬಾರದು. ವರ್ಷಗಟ್ಟಲೆ ಉತ್ಸಾಹದಿಂದ ಮುಂದುವರಿಸಿಕೊಂಡು ಹೋಗುವಂತಹ ಹಾಬಿ ಯಾವುದಿದೆ?'' ಅಂತ ಕೇಳಿದಳು.

ನಾನು ಬಹುವಾಗಿ ಯೋಚಿಸಿದೆ. ಕೊನೆಗೆ,

''ಹ್ಞಾ, ಅಂತಹ ಒಂದು ಹವ್ಯಾಸ ಇದೆ. ಎಂದಿಗೂ ಅದರ ಬಗ್ಗೆ ನನ್ನ ಉತ್ಸಾಹ ಕಡಿಮೆ ಆಗದು ಎಂಬ ನಂಬಿಕೆ ನನಗಿದೆ. ಒಂದೇ ಕೊರತೆ ಎಂದರೆ ನೀವೆಲ್ಲಾ ಮಾಡೋಹಾಗೆ ಅದನ್ನ ಕಣ್ಣರಳಿಸಿಕೊಂಡು ಮಾಡುಕ್ಕೆ ಆಗುಲ್ಲ''

''ಏನದು, ಅಂತಹ ವಿಚಿತ್ರ ಹವ್ಯಾಸ?''

''ನಿದ್ದೆ''

– ಶಿವಕುಮಾರ್

ಮಿಸ್ಟರ್ ಮರ್ಫಿ

- ಭಕ್ತ

ಈವಾಗೆಲ್ಲಾ ಬದಲಾಗಿದೆ ಅನ್ನಿ. ಎಲ್ಲೆಲ್ಲಿ ನೋಡಿದ್ರೂ ಇಂಡಿಯನ್ ಇಂಜಿನಿಯರುಗಳೇ ಇರೋ ಈಗಿನ ದಿನಗಳಲ್ಲಿ ಮೂರ್ತಿ ಅನ್ನೋ ಹೆಸರು, ಹೊಸದಾಗಿ ಶುರುವಾಗ್ತಿರೋ ಯಾವುದೇ ಅಮೆರಿಕನ್ ಸಾಫ್ಟ್‌ವೇರ್ ಕಂಪನೀಗೆ ನಿಜಕ್ಕೂ ಬೆಲೆ ತರುವಂತಹದು. ಒಂದು ಕಾಲದಲ್ಲಿ ಪರಿಸ್ಥಿತಿ ಹೀಗಿರಲಿಲ್ಲ. ಮೂರ್ತಿ ಅನ್ನೋರೆಲ್ಲಾ ''ಮರ್ಫಿ'' ಅಂತ ಕರೆಸ್ಕೊಳ್ಳೋಕೆ ಇಷ್ಟಪಟ್ಟು ತಮ್ಮ ಹೆಸರನ್ನ ಆ ರೀತಿ ಬದಲಾಯಿಸಿಕೊಳ್ತಾ ಇದ್ರು.

ನಾನು ಮರ್ಫಿಯನ್ನು ಮೊದಲು ಭೇಟಿ ಮಾಡಿದ್ದು ಶಿವಮೊಗ್ಗೆಯ ಕನ್ಸರ್ವೆನ್ಸಿ ಓಣಿಯೊಂದರಲ್ಲಿ. ಈ ಕಿರಿದಾದ ಓಣಿಗಳು ನೀವು ಊಹಿಸೋ ಅಷ್ಟು ಕೆಟ್ಟದಾಗೇನೂ ಇರುತ್ತಿರಲಿಲ್ಲ. ಹಚ್ಚ ಹಸುರಿನಿಂದ ತುಂಬಿದ ಈ ಗಲ್ಲಿ ರಸ್ತೆಗಳು ಊರಿನ ರಾಜಮಾರ್ಗಗಳಿಗಿಂತ ಹೆಚ್ಚೇನೂ ದುರ್ಗಂಧಪೂರಿತವಾಗಿ ಇರುತ್ತಿರಲಿಲ್ಲ. ನಾವುಗಳು ಕ್ಲಾಸಿಗೆ ಚಕ್ಕರ್ ಹೊಡದಾಗಲೆಲ್ಲಾ ನಮ್ಮಮ್ಮ ಆಗಲೀ, ಮೇಷ್ಟರಾಗಲೀ ನಮ್ಮನ್ನ ಹುಡುಕಿಕೊಂಡು ಇಲ್ಲಿಗೆ ಬರ್ತಿರ್ಲಿಲ್ಲ ಅನ್ನೋ ಕಾರಣದಿಂದ ಇದೇ ನಮ್ಮ ವಾಸದ ತಾಣ ಆಗಿತ್ತು. ಗೋಲಿ, ಬುಗುರಿ, ಚಿನ್ನಿ ದಾಂಡು ಇವೆಲ್ಲಾ ಆಟಗಳನ್ನ ನಾವು ಆಡ್ತಾ ಇದ್ದ ಉದ್ವೇಗ ನೋಡಿದ್ರೆ ಆಟಕ್ಕಿಂತ ಅದೊಂದು ಕದನ ಅನ್ನಿಸ್ತಾ ಇತ್ತು. ಸೋತೋರು, ಬುಗುರಿ ಜೊತೆಗೆ ತಮ್ಮ ಸ್ವಾಭಿಮಾನಾನೂ ಚಿಕ್ಕೆ ಎಬ್ಬಿಸಿಕೊಂಡು ಹೋಗ್ತಾ ಇದ್ರು. ಸದಾ ಮೂಗು ಸುರಿಸ್ಕೊಂಡು ಸೊರ್ ಪರ್ ಅಂತಿದ್ದ ಮಿಸ್ಟರ್ ಮರ್ಫಿ ಯಾವಾಗ್ಲೂ ಸೋತುಪುರುಕ. ಕುಳ್ಳಕ್ಕಿದ್ದ ಅವನನ್ನ ನಾವೆಲ್ಲಾ ಗಿಡ್ಡ ಅಂತ್ಲೇ ಕರೀತಿದ್ದದ್ದು. ಅನೇಕ ವರ್ಷಗಳಾದ ಮೇಲೆ, ಎಂಭತ್ತರ ದಶಕದಲ್ಲಿ ನನ್ನ ಮಗನೊಂದಿಗೆ ನಾನು ಅಮೆರಿಕಾ ಪ್ರವಾಸ ಹೊರಟಾಗ ನಮ್ಮ ವೀಸಾ ದಾಖಲೆಗೆ ಸ್ಪಾನ್ಸರ್ ಒಬ್ಬ ಬೇಕಾಯಿತು. ನ್ಯೂಹ್ಯಾಂಪ್ಶೈರಿನಲ್ಲಿದ್ದ ತನ್ನ ಗೆಳೆಯನೊಬ್ಬನ ಮೂಲಕ ನನ್ನ ಡಾಕ್ಟರ್ ತಮ್ಮ ನಮಗೆ ಸ್ಪಾನ್ಸರ್ ಪೇಪರ್ಸ್ ತರಿಸಿಕೊಟ್ಟ. ಅಮೆರಿಕಾ ಸೇರಿದ ಮೇಲೆ ಸೌಜನ್ಯಕ್ಕೋಸ್ಕರ ನಾವು ಆತನನ್ನ ಭೇಟಿ ಮಾಡಲು ಟೊಯೋಟಾದಲ್ಲಿ ಹೊರಟೆವು. ಬಾಸ್ಟನ್ನಿನಿಂದ ಮ್ಯಾಂಚೆಸ್ಟರ್ ವರೆಗಿನ ದಾರಿ, ಇಂಗ್ಲಿಷ್ ಹಳ್ಳಿಗಾಡಿನಂತೆ ನಯನಮನೋಹರ. ಊರಾಚೆ ಒಂಟಿ ಮನೆಯೊಂದರಲ್ಲಿ ಆತ ಇದ್ದದ್ದರಿಂದ ಮರ್ಫಿಯ ಮನೆ ಹುಡುಕುವುದು ನಮಗೆ ಸ್ವಲ್ಪ ಕಷ್ಟವೇ ಆಯಿತು ಅನ್ನಿ.

ನಮ್ಮ ಆಗಮನವನ್ನೇ ಇದಿರು ನೋಡುತ್ತಿದ್ದ ಮರ್ಫಿ. ಬಾಗಿಲು ತೆರೆದು ಒಳಗೆ ಕಾಲಿಟ್ಟ ತಕ್ಷಣ ಎಲ್ಲ ಅಮೆರಿಕನ್ ಮನೆಗಳಂತೆ ಒಂದು ಹೈಟೆಕ್ ಪ್ರಪಂಚಕ್ಕೆ ಕಾಲಿಟ್ಟಂತಾಯಿತು. ತನ್ನ ನಾಟಿ ಅತಿಥಿಗಳಿಗೆ ಇದನ್ನೆಲ್ಲಾ ತೋರಿಸಿ ದಂಗು ಬಡಿಸಲು ಉತ್ಸುಕನಾಗಿದ್ದ ಹೊಸದಾಗಿ ಐಶ್ವರ್ಯ ಪಡೆದಿದ್ದ ನಮ್ಮ ಅತಿಥೇಯ.

ಆ ಮನೆಯಲ್ಲಿನ ಸಕಲ ಸಕಲರಣೆಗಳೂ ಅಮೆರಿಕೆಯ ಆಧುನಿಕ ಸಂಸ್ಕೃತಿಗೆ ತಕ್ಕಂತಿದ್ದವು. ಮರ್ಫಿಯ ಕೋಟಿನ ಕಾಲರಿನ ಮೇಲೆ ಕೂತಿದ್ದ ಸಾಧನವೊಂದು ನಿಮಿಷಕ್ಕೊಮ್ಮೆ ಬೀಪ್ ಗುಟ್ಟಿ ಅವನ ಹಿರಿಮೆಯನ್ನು ಸಾರುತ್ತಿತ್ತು. ಅವನೂ ಅದು ಸದ್ದು ಮಾಡಿದಾಗಲೆಲ್ಲಾ ತನ್ನ ಅಮೆರಿಕನ್ ಆಕ್ಸೆಂಟಿನಲ್ಲಿ ಉತ್ತರಿಸಿ ಅದನ್ನು ಸುಮ್ಮನಾಗಿಸುತ್ತಿದ್ದ. ಮರ್ಫಿಯದು ಮಕ್ಕಳಿಲ್ಲದ ಒಬ್ಬೊಂಟಿಗ ಜೀವನ. ಇಂಡಿಯಾನಾದಲ್ಲಿದ್ದ ಅವನ ಪತ್ನಿ ಬಹುತೇಕ ಇವನಂತೆಯೇ ಜೀವನ ಸಾಗಿಸುತ್ತಿರಬಹುದು. ಮನೆ ತುಂಬಾ ಎಲ್ಲೆಲ್ಲಿ ನೋಡಿದರೂ ಟಿವಿಗಳು. ಒಂದು ಬಟನ್ ಒತ್ತಿದ ತಕ್ಷಣ ಫ್ರಿಡ್ಜ್‌ನಿಂದ ಕ್ಯೂಬ್ಡ್ ಅಥವಾ ಕ್ರಷ್ಡ್ ಐಸ್ ಅನ್ನು ಪಡೆಯಬಹುದಾಗಿತ್ತು. ಗುಂಡಿನ ಸಮಾರಾಧನೆಯ ಮಧ್ಯೆ, ಹೆಂಡತಿಯೊಂದಿಗೆ ಮಾತನಾಡಿ, ಆಸ್ಪತ್ರೆಯಿಂದ ಬಂದ ಕರೆಗಳಿಗೆ ಏನೋ ಸಬೂಬು ಹೇಳಿ, ಸಂಜೆಗೆ ನಮ್ಮ ಆತಿಥ್ಯಕ್ಕಾಗಿ ಊರಿನ ಅತ್ಯುತ್ತಮ ರೆಸ್ಟುರಾದಲ್ಲಿ ಟೇಬಲ್ ಬುಕಿಂಗ್ ಕೂಡ ಮಾಡಿಬಿಟ್ಟ ಮರ್ಫಿ.

ಮರ್ಫಿಯ ಕ್ಯಾಡಿಲಾಕಿನಲ್ಲಿ ಅಂದು ಸಂಜೆ ನಾವು ವಾಹನ ಸುಖ ಅನುಭವಿಸಿದ್ದಾಯಿತು. ಕಾರಿನ ಒಳಗಿನಿಂದಲೇ ಗರಾಜಿನ ಬಾಗಿಲನ್ನು ರಿಮೋಟ್ ಕಂಟ್ರೋಲಿನಿಂದ ತೆರೆಯುವ ವಿಧಾನವನ್ನು ಆತ ನಮಗೆ ತೋರಿಸಿದ. ಈ ವೈಭವದ ಕಾರು ಅತಿಥಿಗಳಿಗಾಗಿಯೇ ಮೀಸಲಂತೆ. ರೋಗಿಗಳನ್ನು ನೋಡಲು ಹೋಗುವಾಗ ಮರ್ಫಿ ಪುಟ್ಟ ಕಾರೊಂದನ್ನು ಬಳಸುವ ವಾಡಿಕೆಯಂತೆ. ಆ ಪುಟ್ಟ ಕಾರು ಗರಾಜಿನ ಹೊರಗೆ ಚಳಿಯಲ್ಲಿ ನಡುಗುತ್ತಾ ನಿಂತಿತ್ತು.

ಶಿವಮೊಗ್ಗೆಯ ಕನ್ಸರ್ವೆನ್ಸಿ ಓಣಿಯಲ್ಲಿ ಪ್ರಾರಂಭವಾದ ತನ್ನ ಬಾಳಿನ ಸುದೀರ್ಘ ವೃತ್ತಾಂತವನ್ನು ರೆಸ್ಟುರಾಗೆ ಡ್ರೈವ್ ಹೊರಟಾಗ ಮರ್ಫಿ ನಮ್ಮ ಮುಂದಿಟ್ಟ. ನನ್ನ ಕನಸಿನ ನಾಡು, ಅಮೆರಿಕೆಗೆ ಪ್ರವೇಶ ಪಡೆಯಲು ತಾನು ಪ್ಯಾಸು ಮಾಡಬೇಕಾದ ಪರೀಕ್ಷೆ, ತನಗೆ ಗ್ರೀನ್ ಕಾರ್ಡ್ ದೊರೆತ ಸುದಿನ, ಅಮೆರಿಕನ್ ನಾಗರೀಕತ್ವ ಪಡೆದ ಮಹತ್ವದ ಮಹೂರ್ತ, ಇವೆಲ್ಲದರ ವಿಶದೀಕರಣ ನಮಗೆ ದೊರಕಿತು. ಮರ್ಫಿ ಅಮೆರಿಕನ್ ಸಂವಿಧಾನವನ್ನು ಎಷ್ಟು ಚೆನ್ನಾಗಿ ಕಲಿತಿದ್ದನೆಂದರೆ, ಅವನಿಗೆ ಸಂವಿಧಾನ ನಿಷ್ಠೆಯನ್ನು ಬೋಧಿಸಿದ ಜಡ್ಜ್ ಆನಂದತುಂದಿಲನಾಗಿ, ಇವನ ಜ್ಞಾನವನ್ನು ಹಾಡಿ ಹೊಗಳಿ, ಅನೇಕ ''ಒರಿಜಿನಲ್'' ಅಮೇರಿಕನ್ನರಿಗೆ ಈ

ಬಗೆಯ ಆಸಕ್ತಿ ಇಲ್ಲದುದಕ್ಕೆ ಹಲುಬಿದನಂತೆ. ಅಷ್ಟೊಂದು ಮೆಚ್ಚುಗೆ ದೊರೆತಾಗ ಮೂಡಿದ ಉತ್ಸಾಹದ ಭರದಲ್ಲಿ ಮೂರ್ತಿ ತನ್ನ ಹೆಸರನ್ನು ''ಮರ್ಫಿ''ಗೆ ಬದಲಿಸಿಕೊಂಡನಂತೆ. ಇದು ಆಗ ನನಗೆ ತಿಳಿಯಿತು.

ರೆಸ್ಟುರಾ ಸೇರಿ, ಅಲ್ಲಿನ ಬೆಸ್ಟ್ ಟೇಬಲ್ಲಿನಲ್ಲಿ ಕುಳಿತುಕೊಳ್ಳುವಾಗಲೇ ಮರ್ಫಿ ತನ್ನ ಪರಿಚಯದವರು ಯಾರಾದರೂ ಇದ್ದಾರೆಯೇ ಎಂದು ಸುತ್ತಲೂ ಕಣ್ಣಾಡಿಸಿದ. ಯಾರೂ ಕಾಣಿಸದಿದ್ದಾಗ, ನಮ್ಮ ಸೇವೆಗೆ ನಿಂತಿದ್ದ ವೇಟ್ರೆಸ್‌ಗಳನ್ನು ಅತಿ ಸಲುಗೆಯಿಂದ ಅವರ ಮೊದಲ ಹೆಸರಿನಿಂದಲೇ ಕರೆದು ತಿನಿಸುಗಳನ್ನು ಆರ್ಡರ್ ಮಾಡಿದ. ಇವನ ಸಲುಗೆ ಅವರ ಮೇಲೆ ಏನೂ ಪ್ರಭಾವ ಬೀರಿದಂತೆ ಕಾಣಲಿಲ್ಲ. ಎಂದಿನಂತೆ ಅವರು ಪದಾರ್ಥಗಳನ್ನು ನಮ್ಮ ಮುಂದೆ ಬಿಸುಟಿ ಹೋದರು.

ಊಟ ಮಾಡುತ್ತಿದ್ದಾಗ, ''ಇಂಡಿಯಾದಲ್ಲಿ ಏನು ಕೆಟ್ಟಿದೆ?'' ಎಂಬ ವಿಷಯ ಕುರಿತು ಮರ್ಫಿ ತನ್ನ ಉಪನ್ಯಾಸ ಪ್ರಾರಂಭಿಸಿದ. ಮಾತಿನುದ್ದಕ್ಕೂ ನಾವು ಹೀಗೆ, ನೀವು ಹಾಗೆ ಎಂಬ ಧಾಟಿ ನಡೆದೇ ಇತ್ತು. ''ಇದೆಲ್ಲಿಂದ ಬಂತು, ಈ ನಾವು ನೀವು ಭೇದ'' ಅಂತ ನಾನು ಕೇಳಿದೆ. ''ನನ್ನ ಆತ್ಮ ಎಂದಿಗೂ ಅಮೆರಿಕದ್ದೇ. ಎಲ್ಲೋ ಸ್ವಲ್ಪ ತಪ್ಪಾಗಿ ನಾನು ಇಂಡಿಯಾದಲ್ಲಿ ಹುಟ್ಟಬೇಕಾಯಿತು'' ಅಂತ ಮರ್ಫಿ ಹೇಳಿದಾಗ ನನ್ನ ಸಹನೆಯ ಕಟ್ಟೆ ಒಡೆಯಿತು. ''ಲೋ, ಏನೇ ಹೇಳು ನೀನು ಗಿಡ್ಡಾ ಅನ್ನೋದನ್ನ ಮಾತ್ರ ಮರೀಬೇಡ'' ಎಂದೆ. ಈ ಮಾತು ಕೇಳಿ, ಮರ್ಫಿಗಿಂತ ಹೆಚ್ಚಾಗಿ ಜೊತೆಯಲ್ಲಿದ್ದ ನನ್ನ ಮಗನಿಗೆ ತುಂಬಾ ಮುಜುಗರವಾಯಿತು. ಊಟ ಹಾಕಿದ ಅತಿಥಿಯನ್ನು ಅವಹೇಳನ ಮಾಡಿದ್ದಕ್ಕೆ ಅವ ನನ್ನ ಮೇಲೆ ಕೋಪಗೊಂಡ.

ಆ ರಾತ್ರಿ ನಾವು ರಾಜವೈಭವದಿಂದ ಕಂಗೊಳಿಸುತ್ತಿದ್ದ ನಮ್ಮ ಗೆಸ್ಟ್ ರೂಮಿನ ಹಂಸತೂಲಿಕಾ ತಲ್ಪಗಳ ಮೇಲೆ ಮಲಗಿದೆವು. ಅಮೆರಿಕನ್ನರ ದೃಷ್ಟಿಯಲ್ಲಿ ಅಮೂಲ್ಯವಾದ ಪ್ಲೇ ಬಾಯ್ ಪತ್ರಿಕೆಗಳು ಕೈಗೆ ಸಿಗುವಂತೆ ನಮ್ಮ ಸುತ್ತ ಹರಡಿದ್ದವು. ನಾನು ಆ ಸಂಜೆ ಸಹನೆ ಕಳೆದುಕೊಂಡದ್ದಕ್ಕೆ ಕಾರಣವನ್ನು ನನ್ನ ಮಗನಿಗೆ ವಿವರಿಸಲು ಯತ್ನಿಸಿದೆ. ಮರ್ಫಿ ಯಾವುದೊ ಒಂದು ಅನಾಮಧೇಯ ಜೀವನಕ್ಕೋಸ್ಕರ, ತನ್ನ ಐದು ಸಾವಿರ ವರ್ಷಗಳಷ್ಟು ಪುರಾತನ ಸಂಸ್ಕೃತಿಯನ್ನು ತೊರೆದು ತನ್ನನ್ನ ತಾನೇ ಮಾರಿಕೊಂಡಿದ್ದ. ನಮ್ಮ ಪುರಾತನ ಸಂಸ್ಕೃತಿಯ ನಿಂದನೆಯನ್ನು, ಅದೂ ಈ ಹೊಸ ತಳಿಯ ಎನ್ನಾರೈ ಪ್ರಾಣಿಗಳಿಂದ ಬಂದಾಗ, ಅದನ್ನು ಸಹಿಸುವುದಾದರೂ ಹೇಗೆ?

★★★

ನೆಕ್ಸ್ಟ್ ಟೈಂ...

- ಗೋಪಾಲಿ

ಎಸ್ಸೆಲ್ಸಿ ಓದ್ತಿರೋ ನನ್ನ ಮಗಳು ಅವರ ಟೀಚರ್‌ಗಳು ಹೇಳುವುದನ್ನು ಚಾಚೂ ತಪ್ಪದೇ ಪರಿಪಾಲಿಸ್ತಾಳೆ. ಬೆಳಿಗ್ಗೆ ಐದಕ್ಕೆ ಏಳ್ತಾಳೆ ಎಂಟರವರೆಗೆ ಓದುತ್ತಾಳೆ, ಸಂಜೆ ಐದಕ್ಕೆ ಮನೆಗೆ ಬಂದರೆ ಆಟಕ್ಕೂ ಹೋಗದೇ ಹೋಂವರ್ಕ್ ಮಾಡ್ತಾಳೆ, ರಾತ್ರಿ ಹನ್ನೊಂದು ಹನ್ನೆರಡರತನಕ ಟೀವಿ ಮುಂದೆ ಸಹ ಕೂರದೆ ಓದ್ತಾಳೆ, ಬರೀತಾಳೆ, ಬರೀತಾಳೆ, ಓದ್ತಾಳೆ.

ಕ್ಲಾಸುಗಳು ಆರಂಭವಾದ ಹದಿನೈದೇ ದಿನವಸದಲ್ಲಿ ಅವಳಿಗೆ ಮೊದಲನೇ ಟೆಸ್ಟ್ ಮಡಗಿದರು. ಟೆಸ್ಟ್ ಮುಗಿದ ಮೂರನೇ ವಾರ ಒಂದಿನ ನನ್ನ ಮಗಳು ಸಪ್ಪಗೆ ಕುಳಿತಿತ್ತು. "ಏಕೋ ಪುಟ್ಟಾ ಸಪ್ಪಗಿದ್ದೀ?'... ಅಂದೆ.

'ಅಣ್ಣಾ ಟೆಸ್ಟ್ ಪೇಪರು ಕೊಟ್ರು...' ಅಂದಳು 'ಮ್ಯಾತ್ಸ್ ಪೇಪರು ಇವತ್ತು ಕೊಟ್ರು'...

'ಎಷ್ಟು ಬಂದಿದೆ?...' ಅಂದೆ.

'ಹನ್ನೆರಡಣ್ಣಾ...' ಅಂದಳು.

'ಹನ್ನೆರಡಾ? ಎಷ್ಟಕ್ಕೆ?...'

'ಇಪ್ಪತ್ತೈದಕ್ಕೆ...'

'ಇಪ್ಪತ್ತೈದಕ್ಕೆ ಹನ್ನೆರಡಾ? ಅಂದರೆ ಶೇಕಡಾ 50 ಆಯಿತು. ಐವತ್ತು ತಗೊಂಡರೆ ಸಾಕಾ?..' ಅಂತ ತಂದೆಯ ವ್ಯಾಕುಲತೆಯನ್ನು ನನ್ನ ಧ್ವನಿಯಲ್ಲಿ ಹರಿಸಿ ಕೇಳಿದೆ. ತಂದೆ ಅಂದ ಮೇಲೆ ಅಷ್ಟೂ ವ್ಯಾಕುಲತೆ ತೋರಿಸಲಿಲ್ಲ ಅಂದರೆ ಹೇಗೆ?

'ಸಾಲದು ಅಂತ ಗೊತ್ತಣ್ಣಾ...?

'ಹಾಗಿದ್ದರೆ ಅದೇನು ಮಾಡ್ತೀ?...'

'ನೆಕ್ಸ್ಟ್ ಟೈಂ ಜಾಸ್ತಿ ತಗೋತೀನಿ...'

'ವೆರಿಗುಡ್. ದಟ್ ಷುಡ್ ಬಿ ದಿ ಸ್ಪಿರಿಟ್...' ಅಂತ ಬೆನ್ನು ತಟ್ಟಿದೆ.

ಆವಾರ ಪೂರ್ತಿ ಅವಳ ಟೆಸ್ಟ್ ಪೇಪರ್‌ಗಳನ್ನ ತಂದಳು. ಒಂದರಲ್ಲಿ ಹದಿನಾಲ್ಕು, ಒಂದರಲ್ಲಿ ಹನ್ನೆರಡು, ಒಂದರಲ್ಲಿ ಹದಿಮೂರು ಹೀಗೆ ಎಲ್ಲಾ ಗರಿಷ್ಠ

ಇಪ್ಪತ್ತೈದಕ್ಕೆ 'ಫಿಫ್ಟಿ ಪರ್‌ಸೆಂಟ್ ಆವರೇಜ್‌ನಲ್ಲಿದ್ದೀ. ಈ ತರಹ ತಗೊಂಡರೆ ಪೀಯೂಸೀಗೆ ಸೀಟು ಸಿಗೋಲ್ಲ...' ಅಂತ ಅವರಮ್ಮ ಹೆದರಿಸಿದಳು.

ಎರಡನೇ ಟೆಸ್ಟ್ ಬರೋ ಹೊತ್ತಿಗೆ ಮಗಳ ನಿದ್ದೆ ಸಮಯ ಕಮ್ಮೀ ಆಗಿ ಓದು ಬರಹದ ಸಮಯ ಜಾಸ್ತಿ ಆಯಿತು. ಟೆಸ್ಟ್ ನಂತರದ ಪೇಪರುಗಳು ಬಂದಾಗ ಮಗಳು ಇಂಪ್ರೂವ್ ಆಗಿದ್ದಳು. ಶೇ. ಐವತ್ತೊಂದೂ ಪಾಯಿಂಟು ಆರೂ ಮೂರರ ಹತ್ತಿರ ಬಂದಿದ್ದಳು. ವೆರಿಗುಡ್ ಹೀಗೇ ಮುಂದೂವರೀತಿರು... ಅಂತ ಮತ್ತೆ ಬೆನ್ನು ಚಪ್ಪರಿಸಿದೆ.

'ಆಗಿರೋ ಪೋರ್ಷನ್ಸ್ ಕಡಿಮೆ. ಈಗಲೇ ನೀನು ಹೀಗೆ ತಗೊಂಡರೆ ಪೋರ್ಷನ್ಸ್ ಜಾಸ್ತಿ ಆಗ್ತಾ ಆಗ್ತಾ ಅದೇನು ಮಾಡ್ತೀಯೋ...' ಅಂತ ಅದರಮ್ಮ ರೇಗಿತು. ಮಗು ಪೆಚ್ಚು ಮೋರೆ ಹಾಕಿದ್ದು ನೋಡಿ 'ಬಿಡು ಪರವಾಗಿಲ್ಲ ಇಂಪ್ರೂವ್ ಮಾಡ್ಕೋತಿದೆ...' ಅಂದೆ.

ಮೂರನೇ ಟೆಸ್ಟು ನಾಲ್ಕನೇ ಟೆಸ್ಟು ಆಗೋ ಹೊತ್ತಿಗೆ ಶೇಕಡಾ ಐವತ್ತೆರಡು ಪಾಯಿಂಟ್ ಏಳಕ್ಕೆ ಬಂದು ನಿಂತಿದ್ದಳು. ಹೀಗಾದರೆ ಹೇಗ್ರೀ? ಅಂತ ನನ್ನಾಕೆ ನನ್ನ ಮೇಲೆ ಸಿಡಸಿಡ ಅಂದಳು. ಪಾಪ ಅವಳಿಗೆ ತಾನೇ ಬೇರೆ ಯಾರಿದಾರೆ ಸಿಡ ಸಿಡ ಅನ್ನೋದಕ್ಕೆ ಅಂತ ಅನ್ನಿಸಿಕೊಂಡೆ.

'ಮಗಳಿಗೆ ಪಾಠ ಹೇಳಿಕೊಡಿ, ಊರೆಲ್ಲಾ ಸುತ್ತೋದು ನಿಲ್ಲಿಸಿ, ಮಗು ಎಸ್ಸೆಲ್ಸೀಗೆ ಬಂದಿದೆ. ಅದರ ಜವಾಬ್ದಾರಿ ಬೇಡವೇ ನಿಮಗೆ?...' ಅಂತ ರೇಗಿದಳು.

'ನೀನೇ ಹೇಳಿಕೊಡಬಹುದಲ್ಲಾ ಪಾಠ?' ಅಂದೆ.

'ನಾನು ಬುದ್ಧಿವಂತೆ ಅಲ್ಲ ಅಂತ ಹೀಗೆ ಹಂಗಿಸಬೇಕಾಗಿಲ್ಲ. ಯಾರಾದರೂ ರ‍್ಯಾಂಕು ಪ್ಯಾಂಕು ಬಂದಿರೋರನ್ನೇ ಕಟ್ಕೋ ಬೇಕಿತ್ತು. ನನ್ನನ್ಯಾಕೆ ಕಟ್ಟಿಕೊಂಡಿರಿ?' ಅಂತ ಮುಕ್ಕಾಲು ದಿನ ಒನ್‌ವೇ ಟ್ರಾಫಿಕ್ ರೀತಿ ಇನ್‌ವೇ ಮಾತಿನ ಹೊಳೆ ಹರಿಸಿದಳು. ಇಂತಹ ಒನ್‌ವೇ ಟ್ರಾಫಿಕ್‌ಗೆ ಸೋಲದವರಾರು? ಸೋತೆ. ಪಾಠ ಹೇಳಿಕೊಡಲು ಕೂತೆ. ಐವತ್ತು ವರ್ಷದ ಹಿಂದೆ ನಾನು ಕಲಿತಿದ್ದಕ್ಕೂ ಈಗಿನದಕ್ಕೂ ಸಹಸ್ರ ವರ್ಷಗಳ ಅಂತರ ಇದೆ ಅಂತ ನಂತರ ಹೊಳೀತು. ಪುಟ್ಟೀ ನಾನು - ನಾನು ಕಲಿತ ಕಾಲದ್ದನ್ನ ಹೇಳಿಕೊಟ್ಟರೆ ನಿನಗೆ ಬರೀ ಕನ್‌ಫ್ಯೂಸ್ ಆಗುತ್ತೆ. ಆಮೇಲೆ ನೀನು ಟೆನ್ ಪರ್ಸೆಂಟೂ ತಗೊಳ್ಳೋಕೆ ಆಗುಲ್ಲಮ್ಮಾ ಅಂದೆ.

'ಸರೀಪ್ಪಾ, ನಮ್ಮ ಸ್ಕೂಲಲ್ಲೇ ಮೇಡಂ ಒಬ್ಬರು ಕ್ಲಾಸ್ ಮಾಡ್ತಾರಂತೆ. ಅಲ್ಲೀಗೆ ಹೋಗ್ತೀನಿ' ಅಂತ ಅಂದಿತು.

ಸರಿ ಅಂತ ಮೇಡಂ ಹತ್ತಿರ ಟ್ಯೂಷನ್‌ಗೆ ಸೇರಿಸಿ ವರ್ಷದ ಫೀಸನ್ನು ಮೊದಲೇ ತೆತ್ತೆವು. ಮಗು ಟ್ಯೂಷನ್‌ಗೆ ಹೋಗೋದು, ಟ್ಯೂಷನ್ ಹೋಂವರ್ಕ್

ಮಾಡೋದೂ, ಕ್ಲಾಸಿಗೆ ಹೋಗೋದೂ ಕ್ಲಾಸಿನ ಹೋಂವರ್ಕ್ ಮಾಡೋದು ಮಾಡ್ತಾ ಮಾಡ್ತಾ ದಿನಕ್ಕೆ ಎರಡು ಗಂಟೆ ಮಾತ್ರ ಮಲಗುಕ್ಕೆ ಶುರು ಮಾಡಿತು. 'ಹಾಳಾದ್ದು ಯಾವ ಮುಠ್ಠಾಳ ಈ ಎಸ್ಸೆಲ್ಸಿ ಪರೀಕ್ಷೆ ಕಂಡು ಹಿಡಿದನೋ ಅವನ ವಂಶ ನಿರ್ವಂಶವಾಗಲಿ' ಅಂತ ಸಾವಿರ ಸಲ ನಮ್ಮ ಕೈಲಿ ಆ ಮುಠ್ಠಾಳ ಶಾಪ ಹಾಕಿಸಿಕೊಂಡ. ಎಸ್ಸೆಲ್ಸಿ ಪರೀಕ್ಷೆ ಅನ್ನೋದು ಈ ಪ್ರಪಂಚದಿಂದಲೇ ಸಿಡುಬುರೋಗದ ತರಹ, ಪೋಲಿಯೋ ರೋಗದ ತರಹ ನಾಶವಾಗಿಬಿಡಲಿ ಅಂತ ದೇವರಿಗೆ ಹರಕೆ ಹೊತ್ತು ಒಂದು ವ್ರತಾನೂ ಮಾಡಿದೆವು.

ಮೊನ್ನೆ ಒಂದು ಟೆಸ್ಟ್ ನಡೀತು. ಅದರ ಮೂರನೇ ವಾರ ಟೆಸ್ಟ್ ಪೇಪರಿನ ಸಮೇತ ಮಗಳು ಸಪ್ಪೆ ಮುಖದಿಂದ ಪ್ರತ್ಯಕ್ಷ ಆದಳು. ಪ್ರತಿ ಪತ್ರಿಕೆಲೂ ಎಷ್ಟು ಏನು ಅಂತ ಕೇಳದೇ ಪ್ಲಸ್ ಸೈಡೋ ಮೈನಸ್ಸೋ ಅಂದೆ. ಅಂದರೆ ಹಿಂದಿನ ಟೆಸ್ಟ್‌ಗಿಂತ ಇಂಪ್ರೂವ್ ಆಗಿದೀಯೋ ಡಿಂಪ್ರೂವ್ (ಇಂಪ್ರೂವ್‌ಗೆ ವಿರುದ್ಧಾರ್ಥ) ಆಗಿದೀಯೋ ಅನ್ನುವ ಅರ್ಥದಲ್ಲಿ.

'ಕೊಂಚ ಕೊಂಚ ಪ್ಲಸ್' ಅಂದಳು! ಹಿಂದಿನ ಸಲ ಐವತ್ನಾಲ್ಕು ಪಾಯಿಂಟ್ ಆರು ಇದ್ದದ್ದು ಈಸಲ ಐವತ್ನಾಲ್ಕು ಪಾಯಿಂಟ್ ಆರೂ ಐದಾಗಿತ್ತು! 'ಪುಟ್ಟೀ ಹೀಗಾದರೆ ಹೇಗೆ?' ಅಂತ ನಾನು ಕೇಳಲಿಲ್ಲ. ಅವಳೇ ಹೇಳಿದಳು 'ಮುಂದಿನ ಸಲ ಅಣ್ಣಾ ಚೆನ್ನಾಗಿ ಮಾಡ್ತೀನಿ...' ಯಾಕೋ ನಮ್ಮ ಭಾರತ ಕ್ರಿಕೆಟ್ ಟೀಮಿನ ಕ್ಯಾಪ್ಟನ್ ನೆನಪಿಗೆ ಬಂದ. ಪ್ರತಿ ಸಲ ಮೂತಿ ಮಟ್ಟ ಇಕ್ಕಿಸಿಕೊಂಡಾಗಲೂ ಆತ 'ಮುಂದಿನ ಸಲ ಚೆನ್ನಾಗಿ ಆಡ್ತೀವಿ...' ಅಂತ ಹೇಳ್ತಾನೇ ಇರ್ತಾನೆ ನೋಡಿ ಅದೇ ಪಾಠ ನಮ್ಮ ಮಗೂಗು ಆಗಿದೆಯೋ? ಕ್ರಿಕೆಟ್ಟು ಸಭ್ಯತೆ ಜತೆಗೆ ಇಂತಹ ಅಪ್ಯಾಯಮಾನ ಆಶ್ವಾಸನೆ ನೀಡುವುದನ್ನೂ ಕಲಿಸಿದೆಯೇ?... ಕ್ರಿಕೆಟ್ಟು ಅದೇನು ಕಲಿಸುತ್ತೆ ನೋಡಿ!

★★★

ಆಸೆ

ಹುಡುಗಿಗೆ ಆಸೆ
ಹುಡುಗ ಬಂದು ತಬ್ಬಲಿ
ಅವರಪ್ಪನಿಗೆ ಆಸೆ
ಹುಡುಗನಿಗೆ ತೋರಿಸಬೇಕು
ಬಾಟ ಚಪ್ಪಲಿ

– ಬೇಲೂರು ರಾಮಮೂರ್ತಿ

ಖನ್ನಢಮ್ಮನ ಶೇವೆ

– ಸೂರಿ ಹಾರ್ದಳ್ಳಿ

'ಭಾರೀ ಘರ್ಝನೆ' ಎಂಬ ಹೆಸರಿನ ಸಿನೆಮಾ ನೀವು ನೋಡಿದ್ದೀರಾ? ನೋಡಿರಲಿಕ್ಕಿಲ್ಲ ಬಿಡಿ, ಯಾಕೆಂದರೆ ಪ್ರೇಕ್ಷಕರ ಒತ್ತಾಯದ ಮೇರೆಗೆ ಅದು ಪ್ರದರ್ಶನ ಕಂಡಿದ್ದು ಕೊನೆಯ ಆರನೆಯ ದಿನ ಮಾತ್ರ. ಅದರ ನಿರ್ಮಾಪಕ, ನಿರ್ದೇಶಕ, ನಾಯಕ, ಖಳನಾಯಕ, ಎಲ್ಲಾ ಕಾಶೀಪತಿ. ತಮಿಳು ಅವನ ಮಾತೃಭಾಷೆ, ಹಾಗಾಗಿ ಅವರನ್ನು ಗಾಚೀಬದಿ ಎಂದು ಕರೆದರೂ ತಪ್ಪಿಲ್ಲ. ದೇಹ ಸಣಕಲಾದರೂ ಮಾತಿನಲ್ಲಿ ತೂಕದ ಮನುಷ್ಯ. ತನ್ನನ್ನು ಖಾಶೀಫತಿ ಎಂದು ಕರೆದುಕೊಳ್ಳುತ್ತಾನೆ ಮಾತ್ರವಲ್ಲ, ಸಿನೆಮಾ ಹೆಸರಿಗೂ ಒಂದಿಷ್ಟು ವಜನು ಇರಲಿ ಎಂದೇ ತನ್ನ ಸಿನೆಮಾದ ಹೆಸರನ್ನು ಗರ್ಜನೆ ಬದಲಿಗೆ ಘರ್ಝನೆ ಎಂದಿಟ್ಟಿರುವುದು.

ನಾನು ಆಪಾದಿಸಿದ್ದೆ, 'ಏನು ಹೆಸರ್‍ರೀ ಇದು? ಸರಿಯಾಗಿ ಗರ್ಜನೆ ಎಂದು ಇಡಬಾರದಿತ್ತೇ?' ಎಂದು.

'ನಾಯಿಕಳು ಕೂಗಿದರೆ ಕರ್ಜನೆ ಆಗುತ್ತದೆ. ನಮ್ಮದು ಬಲಿಚ್ಚ ಚಿಮ್ಮ... ಅದು ಘರ್ಝನೆ ಮಾತ್ರ ಮಾಡುವುದು,' ಎಂದು ತಮ್ಮನ್ನು ಸಮರ್ಥಿಸಿಕೊಂಡಿದ್ದರು. ಮಾತು ಮಾತಿಗೆ ಬೆಳೆದು ಅವರ ಬರಲಿರುವ 'ಖನ್ನಢ' ಸಿನೆಮಾಗಳ ಹೆಸರನ್ನು ನನಗೆ ಹೇಳಿ ತಾವು ಹೇಗೆ ಕನ್ನಡ ಸಾಹಿತ್ಯ ಪ್ರಪಂಚಕ್ಕೆ ತಮ್ಮದೇ ಆದ ಕೊಡುಗೆಯನ್ನು ಕೊಡುತ್ತಿದ್ದೇನೆ ಎಂದು ಕೊರೆದು, ಕೊನೆಯಲ್ಲಿ 'ನಾನೂ ಕನ್ನಡಕ್ಕಾರನ್' ಎಂದು ಹೇಳುತ್ತಾ ತಮ್ಮ ಕನ್ನಡಕ ಒರೆಸಿಕೊಂಡರು. ಅವರು ತಮಿಳ್ಗನ್ನಡ ನನಗೆ ತಿಳಿಯುತ್ತದೆ, ಆದರೆ ನಿಮಗೆ ಬರಲಿಕ್ಕಿಲ್ಲವಾದ ಕಾರಣ ಅವರ ಮಾತುಗಳನ್ನು ಶುದ್ಧ ಕನ್ನಡದಲ್ಲಿ ನಾನು ಹೇಳುತ್ತೇನೆ.

'ತಾವು ಮುಂದಿನ ಸಿನೆಮಾದ ಹೆಸರನ್ನು ಬುಚ್ಚ ಎಂದು ಇಟ್ಟಿರುವಿರಿ. ಅದರ ಅರ್ಥವೇನು?' ನಾನು ಕೇಳಿದೆ.

'ಆ ಪದ ನಾನು ಕನ್ನಡಕ್ಕೆ ಕೊಟ್ಟ ಕೊಡುಗೆ. ಬು ಎಂದರೆ ಬುರುಡೆ ಎಂದು ಅರ್ಥ ಹಾಗೇ ಚ್ಚ ಎಂದರೆ ಅಗಚ್ಚ, ಎಂದು ತಿಳಿಯಬೇಕು. ಇವೆರಡರ ಸಂಗಮವೇ ಬುಚ್ಚ. ಈ ರೀತಿಯಲ್ಲಿ ಯಾರೂ ಹೊಸ ಹೊಸ ಪದಗಳನ್ನು ಸೃಷ್ಟಿಸಿ ಕನ್ನಡ ಉದ್ಧರಿಸಿಲ್ಲ,' ಎಂದರು ಕಾಶೀಪತಿ.

'ಬು ಎಂದರೆ ಬುರುಡೆ, ಒಪ್ಪಿದೆ, ಆದರೆ ಅಗಚ್ಚ ಎಂದರೆ ಏನು?'

'ಅದು ಏನೆಂದು ಪ್ರೊ॥ ವೆಂಕಟಸುಬ್ಬಯ್ಯನವರೋ, ಚಿದಾನಂದ ಮೂರ್ತಿಗಳೋ, ಖಿನ್ನಥ ವಿಧ್ವಂಸರೋ ತಲೆ ಕೆಡಿಸಿಕೊಳ್ಳಬೇಕು, ನಾನು ಯಾಕೆ ಯೋಚಿಸಲಿ? ಅವರು ಯೋಚಿಸಿ ಅದರ ಮೂಲ, ಹುಟ್ಟು, ಬೆಳವಣಿಗೆ, ಇತರ ಭಾಷೆಗಳ ಮೇಲೆ ಅದು ಬೀರಿದ ಪರಿಣಾಮ, ಈ ಪದದ ಮೇಲೆ ಇತರರಿಂದ ಆದ ಪ್ರಭಾವ, ಇವರ ಬಗ್ಗೆ ಲೇಖನ ಬರೆಯಲಿ, ನನಗೇಕೆ ಇಲ್ಲದ ಉಸಾಬರಿ?' ಅವರು ತನ್ನನ್ನು ಸಮರ್ಥಿಸಿಕೊಂಡರು.

'ಹಾಗಲ್ಲ ಕಾಶೀಪತಿಯವರೇ, ಹೊಸ ಪದ ಹುಟ್ಟು ಹಾಕುವ ಮೊದಲು ಅದರ ಒಳಾರ್ಥ ಏನೆಂಬ ಒಂದು ಸಮಗ್ರ ಕಲ್ಪನೆ ಇರಬೇಕಲ್ಲವೇ? ಅಗಚ್ಚ ಎಂದರೆ ಏನೆಂದು ಹೇಳುವಿರಾ?'

'ಪದಗಳಿಗೆ ಅರ್ಥ ಇರಬೇಕೆಂದು ಯಾಕೆ ನೀವು ಯೋಚಿಸುತ್ತೀರಿ? ಡವ್ವು, ಕಾಂಜಿ-ಪೀಂಜಿ, ಡಗಾರ್, ಪಟಾಸ್, ಮಟಾಷ್, ಇಂತಹ ಪದಗಳ ಅರ್ಥವೇನು? ಆದರೂ ಜನ ಬಳಸುತ್ತಿಲ್ಲವೇ? ಅದು ನಮಗೆ ಮುಖ್ಯ. ನಾಳೆ ಒಂದು ಯಶಸ್ವಿ ಸಿನೆಮಾ ನಾಯಕ ಅಗುಚ್ಚ ಎಂದು ನಾಲ್ಕಾರು ಬಾರಿ ಹೇಳಿದರೆ ಮುಂದಿನ ಶಬ್ದಕೋಶದಲ್ಲಿ ಅದಕ್ಕೆ ಒಂದು ಜಾಗ ಸಿಗುತ್ತದೆ. ಜನವರಿಗೆ ಪರಿಚಯಿಸುವುದಷ್ಟೇ ನನ್ನ ಕೆಲಸ, ಮಿಕ್ಕಿದ್ದು ವ್ಯಾಕರಣಶಾಸ್ತ್ರಜ್ಞರಿಗೆ, ಕನ್ನಡ ಪಂಡಿತರಿಗೆ ಬಿಟ್ಟದ್ದು'

'ಸರಿ ಸ್ವಾಮಿ, ನೀವು ಹೀಗೇ ಹೊಸ ಹೊಸ ಪದಗಳನ್ನು ಚಲಾವಣೆಗೆ ತರುತ್ತೀರಿ. ತಮ್ಮ ಮುಂದಿನ ಸಿನೆಮಾದ ಹೆಸರೇನು?' ನಾನು ಕೇಳಿದೆ.

'ರೋಮಾ...'

'ರೋಮ ಅನ್ನಿ. ಮೈಮೇಲೆ ಇರುತ್ತವಲ್ಲಾ, ಕೂದಲು, ಅವು ರೋಮ.'

'ನಿಮ್ಮ ರೋಮ ಪುಲ್ಲಿಂಗ. ಕೊನೆಯ ಪದ ದೀರ್ಘವಾದರೆ ಅದು ಸ್ತ್ರೀಲಿಂಗವಾಗುತ್ತದೆ. ಇದು ಕಥಾ ನಾಯಕಿಯ ಹೆಸರು, ಹಾಗೇ ಸಿನೆಮಾದ ಹೆಸರು.'

'ಈ ಪದದ ವಿಂಗಡಣೆ ಮಾಡುವಿರಾ?'

'ಈ ಪದ ಹಲವಾರು ಅರ್ಥಗಳ ಸಂಗಮ, ನನ್ನ ಸಿನೆಮಾದ ಹಾಗೆ. ರೋ ಎಂದರೆ ಇಂಗ್ಲಿಷಿನಲ್ಲಿ ಸಾಲು, ಹಿಂದಿಯಲ್ಲಿ ಅಳು, ಮಾ ಎಂದರೆ ಸಂಸ್ಕೃತದಲ್ಲಿ ತಾಯಿ, ಕನ್ನಡದಲ್ಲಿ ಮಾರುವಿನ ಸಂಕ್ಷಿಪ್ತ ರೂಪ, ಮಾತು ಎಂಬುದರ ಸಂಕೇತ...' ಅವರು ಹೇಳುತ್ತಾ ಹೋದರು, ನಾನು ತುಂಡರಿಸಿದೆ.

'ನಿಮಗೆ ಯಾರು ಹೇಳಿದ್ದು? ಮಾ ಎಂದರೆ ಮಾತು, ಮಾರು ಪದಗಳ ಸಂಕ್ಷಿಪ್ತ ರೂಪ ಎಂದು?'

'ಸರಿ ಹೋಯ್ತು. ನೀವು ಭಾಷೆ ಬೆಳೀಬೇಕು ಎಂದು ಗಂಟೆಗಟ್ಟಲೆ ಮಾತಾಡ್ತೀರಿ, ಪುಟಗಟ್ಟಲೆ ಬರೀತೀರಿ. ನನ್ನಂಥವರು ಸೇವೆಗೆ ಬಂದರೆ ಇಲ್ಲಸಲ್ಲದ ಕೊಶ್ಚನ್ ಕೇಳ್ತೀರಿ. ನೋಡಿ, ನಾಳೆ ಒಂದು ದಿನ ನನಗೆ ಜ್ಞಾನಪಿತ್ತ ಪ್ರಶಸ್ತಿ ಬಂದರೂ ಬರುತ್ತದೆ. ಆಗ ನೀವೆಲ್ಲಾ ನನ್ನ ಬಗ್ಗೆ ಒಂದು ಸಾಕ್ಷ್ಯ ಚಿತ್ರ ಮಾಡಿ ಅವಾರ್ಡ್ ತಗೋತೀರಿ. ಈ ಕನ್ನಡದಲ್ಲಿ ಹಾಗೆ, ಬದುಕಿದ್ದವರಿಗೆ ಬೆಲೆ ಇಲ್ಲ. ಸತ್ತ ಮೇಲೇ ಪರಿಗಣನೆ ಎಲ್ಲಾ....' ಎಂದು ಕಣ್ಣಲ್ಲಿ ನೀರು ಸುರಿಸಿದರು. ನಾನು ವಿದಾಯ ಹೇಳಿದೆ.

★★★

ಟೆನ್ ವೀಕ್

ಒಬ್ಬ ಹೊಸ ನಿರ್ಮಾಪಕ ತನ್ನ ಒಂದು ಚಿತ್ರವನ್ನು ಅನುಭವೀ ನಿರ್ಮಾಪಕ / ಚಿತ್ರ ಹಂಚಿಕೆದಾರರಿಗೆ ತೋರಿಸಿದ. ಅವರು ನಿಮ್ಮ ಚಿತ್ರ ಟೆನ್ ವೀಕ್ಸ್ ಅಂದರು. ನಿರ್ಮಾಪಕ ಖುಷಿಯಾದ. ಅಂದರೆ ತನ್ನ ಖಜಾನೆ ತುಂಬುತ್ತೆ ಅಂತ. ಆದರೆ ಅವರು ಹೇಳಿದ ಟೆನ್ ವೀಕ್ಸ್ ಅಂದರೆ ಚಿತ್ರ ಹತ್ತು ವಾರಗಳ ಕಾಲ ನಡೆಯುತ್ತೆ ಅಂತಲ್ಲ; ಚಿತ್ರದಲ್ಲಿ ಟೆನ್ ವೀಕ್ಸ್; ಅಂದರೆ ಕಥೆ ವೀಕ್ (ಬಲಹೀನ) ಚಿತ್ರಕತೆ ವೀಕ್, ಸಂಭಾಷಣೆ ವೀಕ್, ನಾಯಕ, ನಾಯಕಿ, ಹಾಡು, ಛಾಯಾಗ್ರಹಣ, ಹಿನ್ನಲೆ ಸಂಗೀತ, ಸಂಕಲನ ಹೀಗೆ ಹತ್ತು ಬಲಹೀನತೆಗಳಿವೆ (ಟೆನ್ ವೀಕ್ಸ್ - Ten Weak's ಅಂದ)

– ಬೇಲೂರು ರಾಮಮೂರ್ತಿ

ಕೆ.ಬಿ.ಸಿ.

– ಗಜಾನನ ಟಿ. ಹೆಗ್ಡೆ

ಮನೆಯಲ್ಲಿ ಯಥೇಚ್ಛ ಭೋಜನ, ಬ್ಯಾಂಕಿನಲ್ಲಿ ಯಥಾನುಶಕ್ತಿ ಸೇವೆ ಈ ಸೂತ್ರವನ್ನು ಅನುಸರಿಸಿ ನಿಯಮಿತ (ನನ್ನ ಕೆಲ ಸಹೋದ್ಯೋಗಿಗಳ ದೃಷ್ಟಿಯಲ್ಲಿ 'ನೀರಸ') ಜೀವನ ನಡೆಸಿಕೊಂಡು ಬಂದ ನನ್ನ ಬದುಕಿನಲ್ಲಿ ಯಕಶ್ಚಿತ್ ಟಿ.ವಿ. ಶೋ ಇಷ್ಟೊಂದು ಅಲ್ಲೋಲ ಕಲ್ಲೋಲ ಮಾಡುತ್ತದೆಯೆಂದು ನಿರೀಕ್ಷಿಸಿರಲಿಲ್ಲ. ಯಾವ ಟಿ.ವಿ. ಶೋದ ಬಗ್ಗೆ ಮಾತನಾಡುತ್ತಿದ್ದೇನೆಂದು ತಿಳಿಯಲಿಲ್ಲವೇ? ತಿಳಿಯದೇ ಏನು? ಎಲ್ಲರೂ ಮಾತನಾಡುವುದು ಒಂದರ ಬಗ್ಗೆ ಮಾತ್ರ. ಎಬಿಸಿ ಇಲ್ಲದೆ ಇಂಗ್ಲಿಷ್ ಇಲ್ಲ. ಕೆಬಿಸಿ ಇಲ್ಲದೆ ಟಿ.ವಿ. ಇಲ್ಲ ಎನ್ನುವಂತಾಗಿದೆ.

ಕೆ.ಬಿ.ಸಿ. ಅರ್ಥಾತ್ 'ಕೌನ್ ಬನೇಗಾ ಕರೋಡ್ ಪತಿ'ಯಿಂದ ಮೊದಲು ತೊಂದರೆಯಾದದ್ದು ನನ್ನ ರಾತ್ರಿಯ ಊಟಕ್ಕೆ ಟಿ.ವಿ. ಯುಗದಲ್ಲಿಯೂ ವಾರ್ತೆ ಎಂದರೆ ರೇಡಿಯೋ ವಾರ್ತೆ ಎಂದು ನಂಬಿದವ ನಾನು. ಈ ಟಿ.ವಿ. ವಾರ್ತೆಗಳಿಗೆ ಗಾಂಭೀರ್ಯವೇ ಇಲ್ಲ. ಇಲ್ಲವಾದರೆ ವಾರ್ತೆಯ ಮಧ್ಯದಲ್ಲಿ ಯಾರಾದರೂ ಲಾಲೂಪ್ರಸಾದ ಯಾದವರನ್ನು ಮಾತನಾಡಿಸುವುದುಂಟಾ? ಕನ್ನಡ ವಾರ್ತೆ ಕೇಳೋಣವೆಂದರೆ ಎರಡು 'ಹ' ಕಾರ ದೋಷ. ಹಳಸಿದ್ದ ಸುದ್ದಿ. ಹೊರಳದ ನಾಲಿಗೆ. ಅಲ್ಲದೆ ಆಕಾಶವಾಣಿಯಲ್ಲಿ ಇಂಗ್ಲೀಷ್ ವಾರ್ತೆ ಓದುವವರ ಉಚ್ಚಾರ ಮಾದರಿ ಎಂದು ನಂಬಿದವ ನಾನು. ಹಾಗಾಗಿ ರಾತ್ರಿ ಒಂಬತ್ತು ಘಂಟೆಗೆ ಮಂಗಳೂರು ನಿಲಯದ (ನನ್ನ ಎಪ್ಪತ್ತರ ಮಾಡೆಲ್ ರೇಡಿಯೋದಲ್ಲಿ ಈಗ ಬರುವುದು ಅದೊಂದೇ ಸ್ಟೇಷನ್) ಇಂಗ್ಲೀಷ್ ವಾರ್ತೆ ಕೇಳುತ್ತ ಹೆಂಡತಿ ಒತ್ತಾಯದಿಂದ ಬಡಿಸುವುದನ್ನು ಸಂಕೋಚವಿಲ್ಲದೆ ಇಳಿಸುತ್ತಿದ್ದವ ನಾನು. ಸುಖ ಎಂದರೆ ಅದಪ್ಪ. ಆದರೆ ಕೆ.ಬಿ.ಸಿ. ಪ್ರಾರಂಭವಾದ ಮೇಲೆ ಈ ಸುಖಕ್ಕೆ ಕಲ್ಲು ಬಿತ್ತು. ಹೆಂಡತಿ ಒಂಬತ್ತಕ್ಕೆ ಸರಿಯಾಗಿ ಅಮಿತಾಭನ ಹಾದಿ ಕಾಯುತ್ತ ಟಿ.ವಿ. ಮುಂದೆ ಕುಳಿತುಬಿಡುವಳು. ಎಲ್ಲಾ ಟೇಬಲ್ ಮೇಲಿದೆ, ನೀವೇ ಹಾಕಿಕೊಳ್ಳಿ ಎಂಬ ಸಲಹೆ ಬೇರೆ. ಹೀಗಾಗಿ ಹೆಂಡತಿಯ ಪ್ರೇಮಪೂರ್ವಕ ಒತ್ತಾಯವಿಲ್ಲದೆ ಉಂಡ ಪರಿಣಾಮವಾಗಿ ಎರಡು ಕೇಜಿಯಷ್ಟು ತೂಕವೇ ಕಡಿಮೆಯಾಗಿ ಹೋಯಿತು.

ಗಡದ್ದು ಊಟ ಹೋದರೆ ಹೋಗಲಿ ಎಂದು ಸುಮ್ಮನಿರಬಹುದಿತ್ತು. ಸ್ವಲ್ಪ ತೂಕ ಕಡಿಮೆ ಮಾಡಿ ಎಂದು ವೈದ್ಯರೂ ಹೇಳಿದ್ದರು. ಆದರೆ ಮೊದಲಿಕೆ ಶುರುವಾದದ್ದು ಮಾತ್ರ ಕಷ್ಟಕ್ಕಿಟ್ಟುಕೊಂಡಿತು. ನಿಜವಾಗಿ ಹೇಳಬೇಕೆಂದರೆ ನನ್ನ

ಹೆಂಡತಿ ಈ ಮೊದಲು ನನ್ನನ್ನು ಅಷ್ಟೆಲ್ಲಾ ಬೈದವಳಲ್ಲ. ಎಷ್ಟು ಬೈದರೂ ಸುಧಾರಿಸುವ ಪ್ರಾಣಿಯಲ್ಲ ಎಂಬ ಧೋರಣೆ ಅವಳದು. ಆದರೆ ಈಗ ಮಾತ್ರ ದಿನಕ್ಕೊಮ್ಮೆಯಾದರೂ 'ನೀವು ಇದ್ದೀರಿ ದಂಡಕ್ಕೆ, ಇಡೀ ದಿನ ಪೇಪರ್ ಓದಿ ಕಾಲಹರಣ ಮಾಡುತ್ತೀರಿ. ಅಲ್ಲ ಯಾರ್‍ಯಾರೋ ಬಂದು ಕೆ.ಬಿ.ಸಿ.ಯಲ್ಲಿ ಲಕ್ಷಗಟ್ಟಲೆ ದುಡ್ಡು ತೆಗೆದುಕೊಂಡು ಹೋಗುತ್ತಾರೆ. ಸುಮ್ಮನೆ ಪೇಪರ್ ಉರು ಹೊಡೆಯುವ ಬದಲು ನೀವೂ ಯಾಕೆ ಪ್ರಯತ್ನಿಸಬಾರದು ಇತ್ಯಾದಿ ಇತ್ಯಾದಿ ಮೂದಲಿಕೆ-ಕಮ್-ಪ್ರೋತ್ಸಾಹದ ದಾಟಿಯಲ್ಲಿ ಹೇಳತೊಡಗಿದಳು. ಹೀಗಾಗಿ ನಾನೂ ಬೆಂಗಳೂರಿನ ನಂಬರ ಒತ್ತತೊಡಗಿದೆ. ಒಮ್ಮೆ ಎಂಗೇಜ್ ಬಂದರೆ, ಒಮ್ಮೆ ಈ ನಂಬರೇ ಇಲ್ಲ, ಮಗದೊಮ್ಮೆ ನೀವು ಡಯಲು ಮಾಡಿದ ನಂಬರ್ ಪುನಃ ಪರೀಕ್ಷಿಸಿಕೊಳ್ಳಿ ಇತ್ಯಾದಿ ಉತ್ತರ ಬಂತು. ಕೊನೆಗೊಮ್ಮೆ ರಿಂಗಾಯಿತು. ಖುಷಿಯಿಂದ ಪ್ರಶ್ನೆಗೆ ಉತ್ತರ ಹೇಳಲು ತಯಾರಾದಾಗ ಆ ಕಡೆಯಿಂದ 'ಹಲೋ ಬೆಂಗಳೂರು ಮೆಂಟಲ್ ಹಾಸ್ಪಿಟಲ್' ಎಂದು ಕೇಳಿ ಬಂತು. 'ಸಾರಿ, ರಾಂಗ್ ನಂಬರ್' ಎಂದು ಕೆಳಗಿಟ್ಟೆ. ಆಮೇಲೆ ಅನಿಸಿತು 'ನಂಬರ್ ಸರಿಯಾಗಿತ್ತೇನೋ' ಎಂದು. ಯಾರೋ ಹೇಳಿದರು ಕೋಲ್ಕತಾಕ್ಕೆ ಫೋನು ಮಾಡಿದರೆ ಬೇಗ ಸಿಕ್ಕುತ್ತದೆ ಎಂದು. ಹಾಗಾಗಿ ಬೆಂಗಳೂರಿನ ಬದಲು ಕೋಲ್ಕತಾಕ್ಕೆ ನಂಬರ್ ತಿರುಗಿಸುವುದಕ್ಕೆ ಪ್ರಾರಂಭವಾಯಿತು. ಇದರಿಂದ ಏನೂ ತೊಂದರೆಯಾಗಲಿಲ್ಲ. ತೊಂದರೆಯಾದದ್ದು ಹೆಂಡತಿ ತಂದ ಇನ್ನೊಂದು ಸುದ್ದಿಯಿಂದ. ಅವಳಿಗೆ ಯಾರೋ ಹೇಳಿದರಂತೆ, 'ರಾತ್ರಿ ಎರಡರಿಂದ ಮೂರು ಘಂಟೆಯ ಮಧ್ಯದಲ್ಲಿ ಫೋನು ಮಾಡಿದರೆ ಖಂಡಿತ ಲೈನ್ ಸಿಗುತ್ತದೆ' ಎಂದು. ಯಥಾ ಪ್ರಕಾರ ರಾತ್ರಿ ಫೋನು ಮಾಡುವ ಕೆಲಸ ನನಗೆ ಬಂತು. ಅಲಾರಾಂ ಇಟ್ಟುಕೊಂಡು ಫೋನು ಮಾಡುವ ಕೆಲಸ.

ಅಲಾರಾಂ ಶಬ್ದದಿಂದ ಹೆಂಡತಿ ಮಗನಿಗೆ ತೊಂದರೆಯಾಗಬಾರದೆಂದು ನಾನು ಹಾಲ್‌ನಲ್ಲಿಯೇ ಮಲಗುವಂತಾಯಿತು. ಆದರೆ ಲೈನ್ ಮಾತ್ರ ಸಿಗಲಿಲ್ಲ. ಅಂತಹ ಅಪರಾತ್ರಿಯಲ್ಲಿ ಎಚ್ಚರವಾಗಿರಲು ನನಗೆ ಹುಚ್ಚು ಎಂದರೆ ಟೆಲಿಫೋನು ಲೈನಿಗೇನು ಹುಚ್ಚೇ? ನನ್ನ ಪರಿಸ್ಥಿತಿ ಮಾತ್ರ ತುಂಬಾ ಬಿಗಡಾಯಿಸಿತು. ಒಮ್ಮೆ ಎಚ್ಚರವಾದ ಮೇಲೆ ಬೆಳಗಿನವರೆಗೆ ಹಾಸಿಗೆಯಲ್ಲಿ ಹೊರಳಾಡುವುದೇ ಕೆಲಸ. ಪರಿಣಾಮವೆಂದರೆ ಬ್ಯಾಂಕಿನಲ್ಲಿ ಫೋನಿನ ಘಂಟೆ ಅಲಾರಾಂ ಘಂಟೆಯಾಯಿತು. ಕುರ್ಚಿಯಲ್ಲಿ ಕುಳಿತಂತೆ ತೂಕಡಿಸುವುದು, ಫೋನಿನ ಸದ್ದಾದ ಕೂಡಲೆ ಬೆಚ್ಚುವುದು.

ನನ್ನ ಮಗನಿಗೆ ಮೊದಲು ಇದರಲ್ಲಿ ಆಸಕ್ತಿ ಇರಲಿಲ್ಲ. ಅದೇ ಸಮಯಕ್ಕೆ ಸರಿಯಾಗಿ ಸ್ಥಳೀಯ ಕೇಬಲ್ ಟಿ.ವಿ.ಯವರು ಹಾಕುವ ದಿನಕ್ಕೊಂದು ಭಾಷೆಯ ನಕಲಿ ಕ್ಯಾಸೆಟ್‌ನ ಚಲನಚಿತ್ರ ನೋಡಬೇಕೆಂದು ಹಟ ಮಾಡುತ್ತಿದ್ದ. ಆದರೆ ಶಾಲೆಯಲ್ಲಿ ಅವನ ಮಿಸ್ ಹೇಳಿದಂತೆ, 'ಕೆ.ಬಿ.ಸಿ. ನೋಡಿ, ಅದರಿಂದ ಜಿ.ಕೆ. (ಜನರಲ್ ನಾಲೇಜ್) ಹೆಚ್ಚಾಗುತ್ತದೆ' ಎಂದು. ಎಲ್ಲ ಮಕ್ಕಳ ಹಾಗೆ ಅವನಿಗೂ ಮಿಸ್ ಹೇಳಿದ ಮೇಲೆ ಆಯಿತು. ಆಮೇಲೆ ಮೂವತ್ತಮೂರು ಕೋಟಿ ದೇವರು ಬಂದರೂ ಬದಲಾಯಿಸಲಿಕ್ಕೆ ಆಗಲಿಕ್ಕಿಲ್ಲ. ಹೀಗಾಗಿ ಅವನೂ ಕೆ.ಬಿ.ಸಿ.ಯ ಪರಮ ಭಕ್ತನಾದ. ಮೊದಲೇ ಅವನ ಮಿಸ್ ಕೊಡುತ್ತಿದ್ದ ಹೇರಳ ಮನೆ ಪಾಠಕ್ಕೂ, ಬಣ್ಣ ಹಾಕುವುದು, ಬೀಜ ಅಂಟಿಸುವುದು ಇತ್ಯಾದಿ ಚಟುವಟಿಕೆಗಳಿಗೆ ಅವನಿಗೆ ಹೊತ್ತು ಸಾಕಾಗುತ್ತಿರಲಿಲ್ಲ. ಈಗ ಇದರಲ್ಲಿ ಒಂದೂವರೆ ತಾಸು (ಒಂದು ತಾಸು ನೋಡುವುದಕ್ಕೆ, ಅರ್ಧ ತಾಸು ವಿಮರ್ಶೆಗೆ) ವ್ಯಯವಾಗುವದರಿಂದ ಅವನ ಫೋಟೋ ಕತ್ತರಿಸಿ ಹಚ್ಚುವುದು ಮುಂತಾದ, ಬೇರೆಯವರು ಮಾಡಿದ್ದೆಂದು ಟೀಚರ್‌ಗೆ ತಿಳಿಯದ, ಚಟುವಟಿಕೆಗಳು ನನಗೆ ವರ್ಗಾವಣೆಯಾದವು. ಸಾಮಾನ್ಯ ಜ್ಞಾನ ಸುಧಾರಣೆಗೆ 'ಎನ್‌ಸೈಕ್ಲೋಪೀಡಿಯಾ' ತೆಗೆಸಿಕೊಡಬೇಕೆಂದು ಗಂಟುಬಿದ್ದ. ಅದಕ್ಕೆ ಸಾವಿರಾರು ರೂಪಾಯಿ ಬೆಲೆಯಿದ್ದುದರಿಂದ ಇದ್ದ ಬುದ್ಧಿಯೆಲ್ಲಾ ಖರ್ಚುಮಾಡಿ ಇನ್ನೂರೈವತ್ತು ರೂಪಾಯಿಯ ಜನರಲ್ ನಾಲೇಜ್ ಪುಸ್ತಕದಲ್ಲಿ ಸುಧಾರಿಸಿ ಆಯಿತು. ಅವನ ಪಾಠದ ಪ್ರಶ್ನೆ ಕೇಳಿದೆ ನಾಲ್ಕು ಉತ್ತರದ ಆಯ್ಕೆ ನೀಡಬೇಕೆಂದು ವಾದಿಸತೊಡಗಿದ. ಮೊದಲು ದೊಡ್ಡವನಾದ ಮೇಲೆ ಸಾಫ್ಟ್‌ವೇರ್ ಇಂಜಿನೀಯರ್ ಆಗಬೇಕೆಂದು ಹೇಳುತ್ತಿದ್ದವ ಹರ್ಷವರ್ಧನ ನವಾಟೆಗೆ ಒಂದು ಕೋಟಿ ಸಿಕ್ಕಿದ ನಂತರ ಐ.ಎ.ಎಸ್. ಅಧಿಕಾರಿಯಾಗುತ್ತೇನೆಂದು ಹೇಳತೊಡಗಿದ. ಅವನ ಮೇಲೆ ಕೆ.ಬಿ.ಸಿ.ಯ ಪ್ರಭಾವ ಇಷ್ಟು ಆಗಿದೆ ಎಂದು ತೋರಿಸುವಂತಹ ಸಂಗತಿಯೊಂದು ನಡೆಯಿತು. ಆಗ ನಾಯಿಗಳ ವಿಶೇಷ ತಿಂಗಳು. ನಮ್ಮ ಮನೆಯ ಟಾಮಿ ದಿನಕ್ಕೊಂದು ಗೆಣೆಕಾರನನ್ನು ಕಟ್ಟಿಕೊಂಡು ತಿರುಗುತ್ತಿತ್ತು. ಇದನ್ನು ನೋಡಿದ ನನ್ನ ಮಗ ಹೇಳಿದ ಮಾತು "ಅಪ್ಪಾ ಅಪ್ಪಾ ಟಾಮಿ ಕೌನ್ ಬನೇಗಾ ಮೇರಾ ಪತಿ ಆಟ ಆಡುತ್ತಿದೆ".

ಕೆ.ಬಿ.ಸಿ.ಯಿಂದ ನನಗೆ ಪ್ರಯೋಜನವಾಗಿದ್ದು ಇಲ್ಲ ಎಂದಲ್ಲ. ನನ್ನ ಬಿಳಿ ಕೂದಲನ್ನು ಕಪ್ಪು ಮಾಡಿಸಿಕೊಳ್ಳಲು ಪದೇ ಪದೇ ಒತ್ತಡ ಹೇರುತ್ತಿದ್ದ ಹೆಂಡತಿ, ಅಮಿತಾಭನ ಬಿಳಿ ಗಡ್ಡ ನೋಡಿದ ಮೇಲೆ, "ಹಾಗೆ ಇರ್ಲಿ ಬಿಡ್ರಿ, ಪರವಾಗಿಲ್ಲ" ಎಂದಳು. ಬ್ಯಾಂಕಿನಲ್ಲಿ ಕೆ.ಬಿ.ಸಿ. ಚರ್ಚೆಯಲ್ಲಿ ಪಾಲ್ಗೊಂಡ ಕಾರಣ, ಇದುವರೆಗೂ ನನ್ನ ಅಸ್ತಿತ್ವವನ್ನೇ ಗಮನಿಸದೇ ಇದ್ದ ಸುಂದರಿ ಸಹೋದ್ಯೋಗಿಯೊಬ್ಬಳ

ಮುಗುಳ್ನಗೆಯ ಕಟಾಕ್ಷ ಲಭಿಸುವಂತಾಯಿತು. ಹೀಗಿರುವಾಗ, ಊರಿನಿಂದ ತೀರ್ಥರೂಪರ ಪತ್ರ ಬಂತು. ಸಾರಾಂಶ ಇಷ್ಟೆ, ಅವರು ಇಷ್ಟು ದಿವಸ ಎಂಟೆನಾ ದೂರದರ್ಶನವನ್ನೇ ಅಂಟಿ ಕೂತವರು ಊರಿನಲ್ಲಿ ಕೇಬಲ್ ಬಂದರೂ, ನಮಗ್ಯಾಕೆ ಅವೆಲ್ಲಾ ಈ ವಯಸ್ಸಿನಲ್ಲಿ. 'ಚಂದನ' ನೋಡಿದರೆ ಸಾಕು ಎಂದು ಇದ್ದವರು. ಆದರೆ ಎಲ್ಲರ ಬಾಯಲ್ಲಿ ಕೆ.ಬಿ.ಸಿ.ಯ ಮಾತು ಕೇಳಿ ತಮಗೂ ನೋಡಬೇಕೆಂದು ಎನಿಸಿದೆ. ಆ ಕಾರಣಕ್ಕಾಗಿ ಕೇಬಲ್ ಕನೆಕ್ಷನ್ ತೆಗೆದುಕೊಳ್ಳಬೇಕೆಂದು ಮಾಡಿದ್ದೇವೆ. ಆ ಸಂಬಂಧ ಎರಡು ಸಾವಿರ ರೂಪಾಯಿ ಡಿಪಾಜಿಟ್ ತುಂಬುವುದು ಮಗನಾದ ನಿನ್ನ ಪರಮ ಕರ್ತವ್ಯ ಎಂದು. ಅವರ ಹತ್ತಿರ ದುಡ್ಡಿಲ್ಲ ಎಂದಲ್ಲ. ಆದರೆ ಬ್ಯಾಂಕಿನಲ್ಲಿರುವ ದುಡ್ಡೆಲ್ಲ ಬ್ಯಾಂಕಿನ ಉದ್ಯೋಗದಲ್ಲಿರುವ ನನ್ನದೇ ಎಂದು ಅಂದುಕೊಂಡಿದ್ದಾರೆ. ಹ್ಯಾಗೋ ಸಾಲ ಮಾಡಿ ಸುಧಾರಿಸಿಯಾಯಿತು.

ಕೆ.ಬಿ.ಸಿ.ಯ ಕೃಪೆಯಿಂದ ಇನ್ನೂ ಏನೇನು ಆಗಬೇಕು ಏನೊ. ಏನಾದರೂ ಸರಿ ಚಪ್ಪರ ಹರಿದು ತಲೆಯ ಮೇಲೆ ಬೀಳಲಿಕ್ಕಿಲ್ಲ ಎಂಬ ಧೈರ್ಯದಲ್ಲಿದ್ದೇನೆ.

★★★

ಹೆತ್ತವರ ಹೆಗ್ಗಣ

ಮಗ ತಾನು ಇವತ್ತು ಶಾಲೆಗೆ ಹೋಗೊಲ್ಲ ಅಂತ ಹಠ ಹಿಡಿದಿದ್ದ, ಯಾಕೋ ಅಂದರೆ ಶಾಲೇಲಿ ನನ್ನನ್ನ ಕಂಡರೆ ಹುಡುಗರಿಗೂ ಇಷ್ಟವಿಲ್ಲ, ಅಧ್ಯಾಪಕರಿಗೂ ಇಷ್ಟವಿಲ್ಲ, ಅದಿಕ್ಕೆ ನಾ ಶಾಲೆಗೆ ಹೋಗುಲ್ಲ ಅಂದ. ಅದಿಕ್ಕೆ ಅಮ್ಮ ಮಗನನ್ನು ಪುಸಲಾಯಿಸುತ್ತಾ "ನೋಡು ಮರಿ... ಹಾಗೆಲ್ಲ ಹಠ ಮಾಡಬಾರದು. ಇಷ್ಟವಿಲ್ಲದಿದ್ದರೂ ಎಷ್ಟೋ ಕಡೆ ನಾವು ಹೋಗಲೇ ಬೇಕಾಗುತ್ತೆ. ಶಾಲೇಲಿ ಎಲ್ಲ ನಿನ್ನ ಕಾಯ್ತಿರ್ತಾರೆ ಯಾಕೇಂದ್ರೆ, ಶಾಲೆಗೆ ನೀನೇ ಪ್ರಿನ್ಸಿಪಾಲ್ ಅಲ್ವ... ಹೋಗಪ್ಪ ಜಾಣ" ಅಂದಳು.

– ಬೇಲೂರು ರಾಮಮೂರ್ತಿ

ಇಂದಿರ, ಬಿಂದಿಯಾ, ಸಿಂಧೂರ

– ವಿಜಯ ಸಚ್ಚಿದಾನಂದ

ಇಂದು, ಬಿಂದು, ಸಿಂಧು for short. ಆಹಾ! ಅವರ ಸೊಬಗೇನು! ಕೋಗಿಲೆಯ ಕಂಠ, ನವಿಲಿನ ನಡಿಗೆ, ದುಂಬಿಯ ಕಣ್ಣಿನ ಆ ಚೆಲುವೆಯರು ನಮ್ಮ ಮೊಹಲ್ಲಾದಲ್ಲೇ - ಉಹು! ಬರೀ ಮೊಹಲ್ಲಾನೇ ಅಲ್ಲ! ಆ ಊರಿಗೆಲ್ಲಾ ಸುಪ್ರಸಿದ್ಧರು. ಕಣ್ಣಿಗೆ ಕಜಲ ಹಚ್ಚಿ, ತುಟಿಗಳಿಗೆ ಕೆನ್ನೆಗೆ ಕೆಂಪು ಹಚ್ಚಿ ಬಣ್ಣದ ಸೀರೇನೋ ಬಣ್ಣಬಣ್ಣದ ಸಲ್‌ವಾರ ಕಮೀಜೋ ಹಾಕಿ ರಸ್ತೇಲಿ ಹೊರಟರೂ ಅಂದ್ರೆ - ಬೊಮ್ಮನಹಳ್ಳಿಯ ಕಿಂದರಜೋಗಿ ಹಿಂದೆ ಹಿಂಡುಹಿಂಡು ಇಲಿಗಳು, ನಂತರ ಮಕ್ಕಳು ಹೋಗಲಿಲ್ಲವೇ ಹಾಗೇ ನಮ್ಮೂರೋರೆಲ್ಲಾ ಮಾಡುತ್ತಾ ಇದ್ದ ಕೆಲಸಗಳನ್ನು ಬಿಟ್ಟು ಅವರನ್ನು ಹಿಂಬಾಲಿಸೋರು. ಅವರನ್ನು ಕಂಡ್ರೆ ಎಲ್ಲರಿಗೂ ವಿಪರೀತ ಪ್ರೀತಿ. ಅಂದ್ರೆ ನಿಮಗೆ ಗುಟ್ಟಾಗಿ ಹೇಳ್ಬೇಕೂಂದ್ರೆ ನಮ್ಮ ಮೊಹಲ್ಲಾದ ಹೆಂಗಸರಿಗೆ ಅವರನ್ನು ಮತ್ತು ಅವರ ಹಡೆದಮ್ಮನ ಕಂಡ್ರೆ ಕೋಪ - ಅದೇ ಜಲಸಿಯಿಂದ ಉದ್ಭವವಾದ ಕೋಪ. ಅವರೇನಾದರೂ ನಮ್ಮ ರಸ್ತೆಗೆ ಬರಬೇಕು. ನಮ್ಮ ಮಾತೆಯರೆಲ್ಲಾ ತಾವು ಒಲೆಮೇಲೆ ಹಾಲಿಟ್ಟಿರಲಿ, ನೀರಿಟ್ಟಿರಲಿ ಎಲ್ಲಾ ಮರೆತು ಬಾಲ್ಕನಿಗೆ ಬಂದು ನಿಂತ್ಕೊಳ್ಳೋದು. ಅವರನ್ನು ಕಣ್ಣುತುಂಬಾ ನೋಡಿ ಆನಂದ ಪಟ್ಟ ಮೇಲೆ ಕಣ್ಣಲ್ಲಿ ನೀರು ತುಂಬ್ಕೊಂಡು ನಿಟ್ಟುಸಿರು ಬಿಟ್ಟು ತಲೆ ಮೇಲೆ ಕೈ ಹೊತ್ಕೊಳ್ಳೋರು. ಯಾಕೇಂದ್ರೆ ತಮ್ಮ ಮನೆಮಕ್ಕಳು ಇಂತಹ ಸುರಸುಂದರಿಯರ ಸಾಟಿ ಇಲ್ವಲ್ಲಾಂತ. ನಮ್ಮಮ್ಮ ಬರೀ ಕಣ್ಣೀರು ತುಂಬ್ಕೊಂಡು ನಿಟ್ಟುಸಿರು ಬಿಡೋ ಜಾತಿಗೆ ಸೇರಿದೋರಲ್ಲ. ನಾನೇನಾದ್ರೂ ಅಲ್ಲಿದ್ರೆ ಅವಳ ಉರಿಗಣ್ಣು ನನ್ನ ಮೇಲೆ ಬೀಳ್ತಾಯಿತ್ತು. ಅಪ್ಪಿತಪ್ಪಿ ನಾನೇನಾದ್ರೂ ಅವಳ ಕೈಗೆ ಸಿಕ್ಕಾಕೊಂಡು ಬಿಟ್ಟೇ ಅಂದ್ರೆ - ಅಬ್ಬ! ಅದನ್ನ ನೆನಸ್ಕೊಂಡ್ರೇನೇ ಭಯ ಆಗುತ್ತೆ. ನನ್ನ ಕರೀ ಚಮಡಾನೇ ಸುಲಿದು ಬಿಳಿ ಬಣ್ಣ ಬಳೆದು ಬಿಡೋಳೋ ಏನೋ! ಅವಳ ಕೆಂಪು ಕಣ್ಣುಗಳು ನನ್ನ ಮೇಲೆ ಬೀಳ್ತಿದ್ದ ಹಾಗೇ ನಾನು ಅಲ್ಲಿಂದ ಪರಾರಿ ಆಗೋವೆ.

''ಈಗ ಎಲ್ಲಾದ್ರೂ ಹಾಳಾಗಿ ಹೋಗು! ಆಮೇಲಾದ್ರೂ ನನ್ನ ಕೈಗೆ ಸಿಕ್ತೀಯಲ್ಲಾ ಆಗ ಒಂದು ಕೈ ನೋಡ್ಕೋತೀನೀ'' ಅಂತ ಹಿಂದಿನಿಂದ ಕೂಗೋಳು. ಅವಳು ಹೇಳಿದ ಹಾಗೆ ಮಾಡೋ ಅಂತಹವಳೇ ಅಂತೀನಿ. ಅದೇ ಆ ಗಾದೆ ''ಬೀಸೋ ದೊಣ್ಣೆ ಏಟು ತಪ್ಪಿಸಿಕೊಂಡ್ರೆ ನೂರು ವರ್ಷ ಆಯಸ್ಸು'' ಅನ್ನೋದು ಗಾದೆ ಪಾಲಿಗಂತೂ ಸುಳ್ಳು.

ದೂರದಲ್ಲಿದ್ದ ಸ್ನೇಹಿತೆ ಮನೇಲಿ ಸಾಯಂಕಾಲದ ತನಕ ಕಾಲ ಕಳೆದು ಮನೇಗೆ ಬಂದ್ರೆ - ಹಸಿದ ಹೊಟ್ಟೆಗೆ ಏನಾದ್ರೂ ತಿಂಡಿ ತೀರ್ಥ ಕೊಟ್ಟು ತಂಪು ಮಾಡ್ತಾ ಯಿದ್ಲೋಂತ ನೀವು ಅಂದ್ಕೊಂಡ್ರೆ ಅದು ತಪ್ಪು. ಬೆನ್ಮೇಲೆ ಬಾಸುಂಡೆ ಬರೋ ಹಾಗೆ ಗುದ್ದಿ ''ಬಾ ಒಳಗೆ! ಆವಾಗ ನನ್ನ ಕೈಯಿಂದ ತಪ್ಪಿಸ್ಕೊಂಡು ಓಡದ್ಯಾ. ಈಗ ನಿನಗೆ ಗತಿ ಕಾಣಿಸ್ತೀನಿ.'' ಅಂತ ಹೇಳಿ ಬೆನ್ನಮೇಲೆ ಚೆನ್ನಾಗಿ ಬಾಸುಂಡೆ ಬರೋ ಹಾಗೆ ಗುದ್ದಿ'' ಥೂ! ನೀನು ಇದ್ದಿ ಒಳ್ಳೇ ಎಮ್ಮೆ ಹಾಗೆ. ಆ ಹುಡ್ಗೀರನ್ನೂ ನೋಡು. (ಅಂದ್ರೆ ಇಂದಿ, ಬಿಂದು, ಸಿಂಧಿರನ್ನ) ಒಳ್ಳೆ ದಂತದ ಗೊಂಬೆಗಳು. ಎಲ್ಲಾದಕ್ಕೂ ಪುಣ್ಯ ಪಡಕೊಂಡು ಬಂದಿರಬೇಕು.'' (ಈಗ ಕಣ್ಣೀರು ಯಥೇಚ್ಛವಾಗಿ ಸುರಿಸೋಳು) ''ನೀನು ಎಲ್ಲಾ ನಿಮ್ಮಪ್ಪನ ಮನೆ ಕಡೆಯೋರ ತದ್ರೂಪು'' ಅಂತ ಸೋಟೆ ನೆಗಿದು ದರದರಾಂತ ಎಳೆದುಕೊಂಡು ಹೋಗಿ ತಲೆ ಭರ್ತಿ ಎಣ್ಣೆ ಹಚ್ಚಿ ಮುಖದ ತುಂಬಾ - ಕಣ್ಣು, ಕಿವಿ ಮೂಗು ಅಂತೆಲ್ಲಾ care ಮಾಡ್ದೆ ಸೋಪು ತಿಕ್ಕಿ ಮೂರ್ನ್ಮೂರ್‌ಸತಿ ಮುಖ ತೊಳ್ಸಿ, ಮೇಲೆ ಕಡ್ಲೆ ಹಿಟ್ಟು ತಿಕ್ಕಿ final ಆಗಿ ಮುಖ ಮರ್ಜನ ಮಾಡ್ಸೋಳು. ''ಎಷ್ಟು ತೊಳಸಿದ್ರೇನು ಈ ಗ್ಯಾರಂಟಿ ಬಣ್ಣ ಹೋಗೋದಕ್ಕೆ ಸಾಧ್ಯಾ''ನೇಂತ ಬೈದು ಇನ್ನೊಮ್ಮೆ ಗುದ್ದೋಳು.

ನಾನು ಅವಳೇಟು ತಡೀಲಾರ್ದೆ ''ಊ! ಎದುರು ಮನೆ ವಿಮಲಮ್ಮ ಅವತ್ತು ಹೇಳಲಿಲ್ಲವೇನೋ ನಾನು ನಿನ್ನ ತದ್ರೂಪಾನೇ ಅಂತ. ಅಷ್ಟಕ್ಕೂ ಅವತ್ತು ಸಿಕ್ದಾಗ ನೀನೂ ನಿಮ್ಮಮ್ಮನ ಹಾಗೇ ಇದೀಕಣೇ. ಕಣ್ಣೂ, ಮೂಗೂ, ಬಾಯೀ ಮೇಲಾಗಿ ಆ ಬಣ್ಣ! ದೇವ್ರು ನಿಮ್ಮಮ್ಮನ್ನ ತಯಾರಿಸಿದ ಮೇಲೆ ಆ ಅಚ್ಚನ್ನ ಹಾಗೇ ಇಟ್ಕೊಂಡಿದ್ನೊ ಏನೋ ಆಮೇಲೆ ನೀ ಹುಟ್ಟುವಾಗ ಅದೇ ಅಚ್ಚನ್ನೇ ನಿನ್ನ ಮುಖದ ಮೇಲೆ ಒತ್ತಿದ್ದಾನೆ ಅಲ್ವೇನ್ರೀ ಅಂತ ಪಕ್ಕದಲ್ಲಿ ನಿಂತಿದ್ದ ಪದ್ಮ ಆಂಟೀಗೆ ಹೇಳ್ತಾಯಿದ್ರು'' ಅಂದೆ.

''ಏಯ್! ಬಾಯ್ಮುಚ್ಕೊಂಡು ಕೂತ್ಕೋ. ತಲೆಹರಟೆ ಮಾಡ್ಬೇಡ. ಆ ವಿಮಲಿಗೂ ಪದ್ಮಮ್ಮಂಗೂ ಮಾಡೋಕೆ ಕೆಲ್ಸವಿಲ್ಲ. ಎಲ್ಲಾ ವಿಷಯಕ್ಕೂ ಮೂಗು ತೂರಸ್ತಾರೆ'' ಅಂತ ಬೈದು ನನ್ನ ಕೂದಲನ್ನು ಎಳೆದು ಊರಿ ಬಾಚಿ ಅವರ ಮೇಲಿನ ಕೋಪ ತೀರ್ಸಿಕೊಳ್ಳೋಳು. ಅವಳ ಕೈಯಿಂದ ಬಚಾವಾಗ್ಬೇಕಾದ್ರೆ ನಾನು 'ಲಬೋಲಬೊ' ಅಂತ ಬಾಯಿ ಬಡ್ಕೋಬೇಕು. ಅಕ್ಕಪಕ್ಕದೋರಿಗೆಲ್ಲಾ ಕೇಳ್ಸಿ ಅವರು ಬಂದು ''ಅಯ್ಯೋ! ಬಿಡ್ರಿ ಸಾಕು ಇನ್ನೂ ಆ ಮಗುನ ದಂತದ ಬೊಂಬೆ ಮಾಡೋದು. ದೇವ್ರು ಕೊಟ್ಟ ರೂಪು. ಅದನ್ನೇನು ಬದಲಾಯಿಸೋಕ್ಕೆ ಸಾಧ್ಯಾನೇ'' ಅಂತ ಸಮಾಧಾನ ಮಾಡ್ತಾದ್ಗೇ.

ನನಗೆ ನಮ್ಮಮ್ಮನ ಚಿತ್ರಹಿಂಸೆಯಿಂದ ಪಾರಾಗೋದಕ್ಕೆ ಇದ್ದಿದ್ದು ಒಂದೇ ಮಾರ್ಗ - ಇಂಟಿ, ಬಿಂದಿ ಸಿಂಧಿಯರನ್ನ ಸಾಯ್ಸಿಬಿಡೋದು. ಅದಕ್ಕೆ ನಾನು ಮಾಡ್ತಾಯಿದ್ದಿದ್ದ ಪ್ಲಾನ್ (plan) ಗಳೇನು ಕಮ್ಮೀನೇ!

1. ನಮ್ಮ ನಮಗೆ ಬರ್ತಾಯಿರ್ತಿದ್ದನಲ್ಲಾ ಆ ಹಾವಾಡಿಗನಿಗೆ ಗುಟ್ಟಾಗಿ ಹತ್ತೊ ಇಪ್ಪತ್ತೊ ಕೊಟ್ಟು (ಅಮ್ಮನ ದೇವರ ಮುಂದಿನ ಹುಂಡಿಯಿಂದ ಕದ್ದಿದ್ದು) ಅವನ್ಹತ್ರ ಇರೋ ಕಾಳಸರ್ಪನ ಅವರ ಮನೆಗೆ ಬಿಟ್ಟು ಅವರನ್ನ ಕಚ್ಚೊ ಹಾಗೆ ಮಾಡೋದು.

2. ದೇವರನ್ನ ಅತ್ಯಂತ ವಿನಯದಿಂದ ಶ್ರದ್ಧೆ ಮತ್ತು ಭಕ್ತಿಯಿಂದ ಪೂಜೆ ಮಾಡಿ ಅಂದ್ರೆ ತಪಸ್ಸು ಮಾಡಿ ಅವರ ಮುಖದ ಮೇಲೆಲ್ಲಾ ಗುಳ್ಳೆ ಬರೋ ಹಾಗೆ ಮಾಡೊದು. ಹಾಗೇ ತಪಸ್ಸು ಮಾಡ್ತಾ ಕೂತ್ಕೊತಿದ್ದ ಹಾಗೇ ಅಮ್ಮನ್ನ ಧ್ವನಿ ''ಲೇ! ಏನು ಪುಸ್ತಕ ಮುಂದಿಟ್ಕೊಂಡು ಹಾಗೇ ತೂಕಡಿಸ್ತಾ ಕೂತ್ಕೊಂಡು ಬಿಟ್ಯಾ. ಸಾಕು ನಿದ್ದೆ ಮಾಡಿದ್ದು ಓದ್ತಾ ಕೂತ್ಕೊ'' ಅಂತ ಕೂಗಾಡಿ ದೇವರು ಪ್ರತ್ಯಕ್ಷವಾಗೋ ಮೊದಲೇ ಎದ್ದು ಕೂರ್ಸೋಳು. ಹಾಗೇ ಒಂದಿನ ಬೊಂಬೆ ಅಂಗ್ಡಿನಲ್ಲಿ ಬಿಳಿ ಬೊಂಬೆ ಒಂದನ್ನ ಕೊಂಡುಕೊಂಡು (ಅದಕ್ಕೆ ನೀಲಿ ಕಣ್ಣು ಕೆಂಪು ಕೂದಲು - ಪರಂಗಿಯೋರಿಗೆ ಇರೋಲ್ವೆ ಹಾಗಿತ್ತು) ಅದನ್ನೇ ಇಂದಿ, ಸಿಂಧಿ ಬಿಂದಿ

ಅಂತ ಮನಸ್ಸಿನಲ್ಲಿ ಮಾಡ್ಕೊಂಡು ಅದಕ್ಕೆ ಗುಂಡು ಪಿನ್ನೆಲ್ಲಾ ಚುಚ್ಚಿ ಅವರುಗಳಿಗೆ ಮೈ ಕೈ ಮೇಲೆಲ್ಲಾ ಗುಳ್ಳೆಗಳಾಗಲಿ ಅಂತ ಹರಸ್ಕೊಂಡು ಮಂಚದ ಕೆಳಗೆ ಎಸೆದಿದ್ದೆ. ಅವರಿಗೆ ಗುಳ್ಳೇ ಬರೋದು ಹೋಗ್ಲಿ. ಆ ಬೊಂಬೆ ಅಮ್ಮನ ಕೈಗೆ ಸಿಕ್ಕಿ ನನ್ನ ಬೆನ್ನೆಲ್ಲಾ ಬಾಸುಂಡೆ ಬರೋ ಹಾಗೆ ಕುಕ್ಕಿ ''ಅಯ್ಯೋ! ಅಂಥ ಸುಂದರವಾದ ಬೊಂಬೆ ಹಾಳ್ಮಾಡ್ಬಿಟ್ಯಲ್ಲೇ'' ಅಂತ ಕೂಗಾಡಿದ್ಲು.

ಇಷ್ಟೆಲ್ಲಾ ಮಾಡದ್ರೂ, ಅವ್ರಿಗೆ ಏನೂ ಆಗ್ಲಿಲ್ಲಾಂತೀನಿ! ಅದೇ ನವಿಲಿನ ನಡಿಗೆಯೊಂದಿಗೆ ನಮ್ಮನೆ ಮುಂದೆ ಬಂದು ಅವರನ್ನ ತೊಟ್ಟಿಗೆಬ್ರೋರು. ಅಮ್ಮ ರೊಚ್ಚಿಗೆದ್ರೆ ಗೊತ್ತಲ್ಲ ಅದರ ಪರಿಣಾಮ. ನನ್ನ ಬೆನ್ನ ಮೇಲೆ ಗುದ್ದು.

''ಕಾಲಾಯ ತಸ್ಮೈ ನಮಃ''

ಮದುವೆಯಾಗಿ ಸಂಸಾರವಂದಿಗಳಾಗಿ ಹೊರನಾಡುಗಳಲ್ಲೆಲ್ಲಾ ಇದ್ದು ಈಗ ಮತ್ತೆ ಜೀವನದ ಮಿಕ್ಕ ವರ್ಷಗಳನ್ನು ಸುಖವಾಗಿ ಕಳೆಯಬೇಕೆಂದು ತಾಯ್ನಾಡಿಗೆ ಮರಳಿದ್ದೇನೆ. ಇಂದಿ ಬಿಂದಿ ಸಿಂಧಿಯರ ರೂಪ ಅಚ್ಚಳಿಯದೆ ನಿಂತಿದೆ. ಅದ್ರ ಜೊತೆಗೆ ನನ್ನ ಬೆನ್ನಿನ ಮೇಲೆ ಬಿದ್ದ ಬಾಸುಂಡೆಗಳೂ ಸಹ. ಅಮ್ಮ ಈಗ ಲೌಕಿಕ ವಿಷಯಗಳಿಂದ retire ಆಗ್ಬಿಟ್ಟಿದ್ದಾಳೆ. ಹಾಗಂದರೆ ಪೂಜೆ, ಪುನಸ್ಕಾರ ವೇದಾಂತ

ಅಂತೆಲ್ಲಾ ತಲೆ ಕೆಡಿಸ್ಕೊತಾಯಿದ್ದಾಳೆ ಅಂತಲ್ಲ ತನ್ನದೇ ಆದ ಮೈ ಕೈ ಮಂಡಿ ನೋವುಗಳಲ್ಲಿ ಮುಳಗಿಬಿಟ್ಟಿದ್ದಾಳೆ. ಯಾರು ಏನೇ ವಿಷಯ ಹೇಳಲಿ ಕೇಳಲಿ ತನ್ನ ನೋವಿನ ವಿಷಯ ಶುರು ಮಾಡಿ - ಅದೇ ವಿಷಯ ಮಾತಾಡಿ ಅದರೊಂದಿಗೆ ಮುಕ್ತಾಯ ಮಾಡ್ತಾಳೆ. ಮಿಕ್ಕ ವಿಷಯವೆಲ್ಲಾ ತುಚ್ಛ. ಹೀಗಾಗಿ ಅಮ್ಮನಿಂದಾನೂ ಅವರ ಬಗ್ಗೆ ಏನೂ ಗೊತ್ತಾಗಿರಲಿಲ್ಲ.

ಆ ದಿನ ಚಿಕ್ಕಮ್ಮನ ಮನೆಗೆ ಹೋಗಿದ್ದೆ. ಬೆಳಗ್ಗೆ ಎಲ್ಲಾ ಅಲ್ಲೇ ಇದ್ದು ಸಾಯಂಕಾಲ ನಾಲ್ಕರ ಸಮಯಕ್ಕೆ ಮನೆಗೆ ವಾಪಸ್ಸಾಗೋ ಬಸ್ಸಿನಲ್ಲಿ ಹತ್ತಿದೆ. ಬಸ್ಸು ಸಿಕ್ಕೋದೇನು ಕಷ್ಟವಿಲ್ಲ ಚಿಕ್ಕಮ್ಮನ ಮನೆಯಿಂದ ಯಾಕೇಂದರೆ ಅದೇ starting point. ಒಳ್ಳೇ ಭರ್ಜರಿ ಸೀಟು - ಡ್ರೈವರಿನ ಹಿಂಭಾಗದಲ್ಲೇ - ಕಿಟಕಿ ಪಕ್ಕನೇ ಹಿಡಿದು ಸುಖಾಸೀನಳಾದೆ. ಸಧ್ಯ ಆರಾಮವಾಗಿ ಮನೆ ತನಕ ಕೂತುಕೊಂಡೇ ಹೋಗಬಹುದಲ್ಲಾ ಅನ್ನೋ ಆನಂದ. ಎದುರಿನ ಹೋಟಲಿನಲ್ಲಿ ತಿಂಡಿ ಕಾಫಿ ಮುಗಿಸಿ ಬಂದ ಡ್ರೈವರು ಕಂಡಕ್ಟರ್ ಸೀಟಿಗೂ ಕಾಯ್ದೆ ಬಸ್ ಸ್ಟಾರ್ಟ್ ಮಾಡೇ ಬಿಟ್ಟ. ಸ್ವಲ್ಪ ದೂರ ಮುಂದಕ್ಕೂ ತೊಗೊಂಡು ಹೋಗಿದ್ದ. ನನಗೆ ಒಂದು ಸಣ್ಣ ತೂಕಡಿಗೆ ಶುರುವಾಯ್ತು. ಡ್ರೈವರು ಇದ್ದಕ್ಕಿದ್ದ ಹಾಗೆ ಬ್ರೇಕ್ ಹಾಕಿ ಬಸ್ ನಿಲ್ಸಿದ. ಬ್ರೇಕ್ ಹಾಕಿದ ರಭಸಕ್ಕೆ ನನ್ನ ನಿದ್ರೆ ಹಾರೋಯ್ತು ಕಿಟಕಿಗೆ ಡಿಕ್ಕಿ ಹೊಡೆದೆ. ಮುಂದೆ ನೋಡ್ತೀನಿ ಮೂರು ಹುಡುಗಿಯರು ನಿಂತಿದ್ದಾರೆ. ಕೈ ಬೀಸ್ತಾಯಿದ್ದಾರೆ. ತೆಳ್ಳಗೆ ಬೆಳ್ಳಗೆ ಎತ್ತರವಾಗಿದ್ದಾರೆ. ಸುರಸುಂದರಿಯರು. ಬಣ್ಣ ಬಣ್ಣದ ಸಲ್ವಾರ್ ಕಮೀಜ್ ಹಾಕಿದ್ದಾರೆ. ಹೈ ಹೀಲ್ಡ್ ಶೂಗಳು ಬೇರೆ ಅವರು ಕನ್ನೆ ತುಟಿಗಳಿಗೆ ಬಳಿದ ಬಣ್ಣ ಫಳ ಫಳ ಅಂತ ಹೊಳೀತಾಯಿದೆ. ಅವರುಗಳು ತಮ್ಮ ಕಣ್ಣುಗಳಿಗೆ ತಮ್ಮ ಮುಖಕ್ಕಿಂತ ದೊಡ್ಡದಾದ ಕಪ್ಪು ಕನ್ನಡಕ ಏರ್ಸಿದ್ದಾರೆ. ನನ್ನ ಮಂಪರು ಕಣ್ಣುಗಳಿಗೆ ಅವರುಗಳು ಇಂದಿ, ಬಿಂದು, ಸಿಂಧಿಯರ ಪುನರಾವತಾರ ಎನ್ನುವ ಅನುಮಾನ ಬಂತು. ಹೊಟ್ಟೆ ಭರ್ತಿ ಆಗ ತಾನೇ ತಿಂಡಿ ತಿಂದಿದ್ದ ಡ್ರೈವರ್ ಮತ್ತು ಕಂಡಕ್ಟರ್ ಮುಖದಲ್ಲಿ ನಗು ಚಿಮ್ಮಿತು. ಡ್ರೈವರು ಪಿಚಕ್ ಅಂತ ಕಿಟಕಿಯಿಂದಾಚೆ ಉಗುಳಿ ತನ್ನ ಬಲಗಣ್ಣನ್ನು ಕೊಂಚ ಕಿರಿದು ಮಾಡಿದ. ಬಹುಶಃ Wink ಮಾಡಲಿರಬಹುದು. ಮುಂದಿದ್ದ ಕಿಟಕಿಯಿಂದ ನನಗದು ಕಂಡಿತು. ಪಕ್ಕದಲ್ಲಿದ್ದ ಕಂಡಕ್ಟರ್ ಮುಖದಲ್ಲೂ ನಗೆ ಮೂಡಿತು. ಅಷ್ಟರಲ್ಲಿ ಆ ತ್ರಿಮೂರ್ತಿಗಳಲ್ಲಿ ಒಂದು ತನ್ನ ಕರಿ ಕನ್ನಡಕ ತೆಗೆದು ಬಸ್ ನಂ. ಓದೋದಕ್ಕಿರಬಹುದು ಕತ್ತನ್ನು ಕೊಕ್ಕರೆಯಂತೆ ಚಾಚಿತು. ಆ ಕ್ಷಣ ನಗೆ ಮುಖದ ಡ್ರೈವರ್ ಮುಖ ಬಿರುಸಾಯಿತು. ಚಾವಟಿಯಂತೆ ಮಾತು ಹೊರಬಂತು. ''ಏನ್ರೀ ಅಜ್ಜೀರಾ! ಬಸ್ ನಂ. ಕಾಣೋಲ್ವೇನು? ಇದು 16 ನಂ. ಬಸ್. ಆ ಕಪ್ಪು ಕನ್ನಡಕಗಳನ್ನ ಎಸೆದು ಚಾಳೀಪದ ಕನ್ನಡಕ ಹಾಕ್ಕೋಳಿ. ಹೂ! ಹತ್ತಿ ಬೇಗ. ಒಳ್ಳೆ

ಗಿರಾಕಿಗಳು'' ಅಂತ ಜೋರಾಗಿ ಕೂಗಿದ. ಗ್ಯಾರಂಟಿ ವರುಗಳು ಇಂದಿ, ಬಿಂದಿ, ಸಿಂಧಿ ಅಂತ ಗೊತ್ತಾಗ್ಹೋಯ್ತು. ಕುಶಲೋಪರಿ ವಿಚಾರಿಸೋಣಾಂತ ಹಿಂದೆ ತಿರುಗಿ ನೋಡಿದೆ. ಜನ ಸಮುದಾಯ ಅವರನ್ನು ಮುಚ್ಚಿಬಿಟ್ಟಿತು. ಯಾರಾದರೂ ತಮಗೆ ಸೀಟು ಬಿಟ್ಟುಕೊಡಬಹುದೇನೋಂತ expected ಆಗಿ ಅಲ್ಲಿ ಇಲ್ಲಿ ನೋಡ್ತಾಯಿದ್ದದ್ದು ಕಾಣಿಸ್ತು ಅಷ್ಟೆ!

Better luck next time ಅಂದ್ಕೊಂಡೆ. ಅಂತೂ ಇನ್ನೂ ಒಂದು ತರಹ ಮಿಂಚುತ್ತಾಯಿದ್ದಾರೆ. ಸಂದೇಹವಿಲ್ಲ. ಅದೇನೋ ಅಂತಾರಲ್ಲ ಹುಣಿಸೆ ಮರಕ್ಕೆ ಮುಪ್ಪಾದರೆ ಹುಣಿಸೇ ಹಣ್ಣಿಗೆ ಮುಪ್ಪೇಂತ ಹಾಗೆ!

★★★

ಅಪರಂಜಿ ಹನಿ

ಅವಳೆಂದಳು
ಬದುಕಿನಲ್ಲಿ
ನೀನೊಬ್ಬನಿಲ್ಲದಿದ್ದರೆ
ಬೋರೋ ಬೋರು
ಅವನೆಂದ
ಬದುಕಿನಲ್ಲಿ
ನೀನೊಬ್ಬಳೇ ಇದ್ದರೆ
ಬೋರೋ ಬೋರೋ

ಹೆಂಡತಿ
ಗಂಡನಿಗೆ
ಆಜ್ಞಾಪಿಸಿದಳು
ಕುಡಿದು ಮನೆಗೆ ಬರಬೇಡ
ಗಂಡ
ಹೆಂಡತಿಯ ಆಜ್ಞೆ
ಪಾಲಿಸಿದ
ಕುಡಿದ
ಆದರೆ ಮನೆಗೆ ಬರಲಿಲ್ಲ

– ಬೇಲೂರು ರಾಮಮೂರ್ತಿ

ಫ್ಯಾಷನ್ ಫ್ಯಾಷನ್ ಫ್ಯಾಷನ್

- ಶಂಸ ಐತಾಳ

ಪ್ರಸಿದ್ಧ ಇಂಗ್ಲಿಷ್ ಮಾಸಪತ್ರಿಕೆಯೊಂದರ - ಕ್ಷಮಿಸಿ, ಮಂತ್ಲಿಯೊಂದರ ಈಚಿನ ಸಂಚಿಕೆಯ ಮುಂ-ಹಿಂ ಪುಟಗಳಲ್ಲಿ ಪ್ರಕಟವಾದ ಎರಡು ಚಿತ್ರಗಳು ನೆನಪಿಗೆ ಬರುತ್ತಾ ಇವೆ. ಮುಂದಿನ ಪುಟದ್ದು, ಸುಮಾರು ಮೂರಡಿ ಪರಿಧಿಯ, ಐದೂವರೆ ಅಡಿ ಎತ್ತರದ, ಹಾಲು ಬಿಳುಪು ಬಣ್ಣದ ರಟ್ಟಿನ ಪೆಟ್ಟಿಗೆಯ ಚಿತ್ರ. ಪೆಟ್ಟಿಯ ಮುಂದಿನ ಭಾಗ ವಿವಿಧ ಬಣ್ಣಗಳ ಪ್ರಕೃತಿ ಚಿತ್ರಗಳಿಂದ ಅಲಂಕೃತ. ಪೆಟ್ಟಿಗೆಯ ಮೇಲ್ಭಾಗದಲ್ಲಿ ಮಾತ್ರ ಎರಡು ರಂಧ್ರಗಳು ಅವುಗಳಿಂದ ಇಣುಕುವ ಎರಡು ಪಿಳಿ ಪಿಳಿ ಕಣ್ಣುಗಳು. ಪೆಟ್ಟಿಗೆ ನೆಲದ ಮೇಲೆ ನಿಂತಿವೆಯೇ? ಊಹು! ಎರಡು ಕಾಲುಗಳ ಮೇಲೆ ನಿಂತಂತಿದೆ. (ಪಾದಗಳಷ್ಟೇ ತೋರುತ್ತಿವೆ. ಆದರೆ ಹಿಮ್ಮಡಿ ಎತ್ತರದ ಸುಂದರ ಚಪ್ಪಲಿಗಳನ್ನು ಧರಿಸದ ಪಾದಗಳು. ಆದ್ದರಿಂದ ಮನುಷ್ಯ ಜಾತಿಗೇ ಸೇರಿದ ಪ್ರಾಣಿಯಿರಬೇಕು) ಹಿಂದಿನ ಪುಟದ್ದು, ಸ್ಪಷ್ಟವಾಗಿ ಮಹಿಳೆಯ ಚಿತ್ರ ಎದ್ದು ಕಾಣುವಂತಹ ನಿರಾಡಂಬರ ಸೌಂದರ್ಯ, ನಿರ್ವಸ್ತ್ರ ಸೌಂದರ್ಯ ಹೀಗೆಂದೊಡನೆ ಗಾಬರಿ ಪಡಬೇಡಿ. ಇದು ನಗ್ನ ಚಿತ್ರವಲ್ಲ ಇವಳು ಒಳ ಉಡುಪುಗಳನ್ನು ತೊಟ್ಟಿದ್ದಾಳೆ.; ಆದರೆ ಅವು ಬಟ್ಟೆ ಹೊಲಿದು ದರ್ಜಿ ಸಿದ್ಧ ಪಡಿಸಿದ ಸಿದ್ಧ ಒಳ ಉಡುಪುಗಳಲ್ಲ. ಬದಲಾಗಿ ವಿಧ ವಿಧದ ತರಕಾರಿ ಚೂರುಗಳನ್ನು, ಹೋಳುಗಳನ್ನು ಬಳಸಿ ಕುಶಲ ಸಸ್ಯವಸ್ತ್ರಾಲಂಕಾರ ತಜ್ಞನೊಬ್ಬ, ವಿಶೇಷ ಉದ್ದೇಶದಿಂದ ತಯಾರಿಸಿದ ಒಳ ಉಡುಪುಗಳು, ವೆಜಿಟೇರಿಯನ್ ಒಳ ಉಡುಪುಗಳು.

ಇವೆರಡೂ, ಸದ್ಯದಲ್ಲಿಯೇ ನಡೆಯಲಿರುವ ವಿಶ್ವ ಫ್ಯಾಷನ್ ಮೇಳದಲ್ಲಿ ಭಾಗವಹಿಸಲಿರುವ ತರುಣಿಯರ ಛಾಯಾ ಚಿತ್ರಗಳಂತೆ.

ಹಿಂದಿನ ಪುಟದ ಚಿತ್ರವೇನೋ ಸರಿಯೇ. ಆದರೆ ಮುಂದಿನ ಪುಟದಲ್ಲಿ, ರಟ್ಟಿನ ಪೆಟ್ಟಿಗೆ ಮಾತ್ರ ಕಾಣುತ್ತಿದೆಯಷ್ಟೇ ಹೊರತು, ತರುಣಿ ಎಲ್ಲಿ ಕಾಣುತ್ತಿದ್ದಾಳೆ? ರಟ್ಟಿನ ಪೆಟ್ಟಿಗೆಯೇ ಅವಳ ಮುಖ್ಯ ಫ್ಯಾಷನ್ ಸಾಧನವೆಂಬುದೇ ಈ ರಸಪ್ರಶ್ನೆಯ ಸರಿಯುತ್ತರ.

'ನೀಮಾಯೆಯೊಳಗೊ, ನಿನ್ನೊಳು ಮಾಯೆಯೋ' ಎಂಬಂತೆ, ನಾವು ಫ್ಯಾಷನ್ನಿನೊಳಗೊ, ನಮ್ಮೊಳಗೇ ಫ್ಯಾಷನ್ನೋ.

ಹಿಂದೆ ವಿವರಿಸಿದ ಇವೆರಡೂ ಚಿತ್ರಗಳು, ವಿಚಿತ್ರ ಚಿತ್ರಗಳು, ಫ್ಯಾಷನ್‌ನ ಎರಡು ಅತಿರೇಕತೆಗಳನ್ನು, ಎಕ್ಸ್ಟ್ರೀಮಿಟಿಗಳನ್ನು ಪ್ರತಿನಿಧಿಸುತ್ತವೆ. ಏನು ಈ ಫ್ಯಾಷನ್? ಏಕೆ ಈ ಫ್ಯಾಷನ್?

ಸಮಾಜದಲ್ಲಿ ಉಡಿಗೆ ತೊಡಿಗೆ, ಮಾತುಕಥೆ, ನಡವಳಿಕೆ ಸಂಪ್ರದಾಯ, ಆಚಾರ ವಿಚಾರ ಇತ್ಯಾದಿಗಳಲ್ಲಿ, ಒಂದು ಕಾಲದಲ್ಲಿ ಅನುಸರಿಸಲಾಗುವ, ಎಂದರೆ ರೂಢಿಯಲ್ಲಿರುವ ಶೈಲಿಯೇ ಫ್ಯಾಷನ್. ಕನ್ನಡದಲ್ಲಿ ಇದಕ್ಕೆ ನೀಟುಗಾರಿಕೆ ಅಥವಾ ಷೋಕಿ ಎನ್ನುತ್ತಾರೆ ಫ್ಯಾಷನ್ ಮಾನವ ನಿರ್ಮಿತವಾದ ಒಂದು ಸಾಂಕ್ರಾಮಿಕ ರೋಗವಲ್ಲದೆ ಇನ್ನೇನೂ ಅಲ್ಲ. ಆ ಸ್ಕಾರ್‌ವೈಲ್ಡ್ ಹೇಳಿದಂತೆ, ಫ್ಯಾಷನ್ ಎಂಬುದು ಎಷ್ಟು ವಿಕೃತವೆಂದರೆ, ಎಷ್ಟು ಅಸಹನೀಯವೆಂದರೆ, ಕನಿಷ್ಠ ಆರು ತಿಂಗಳಿಗೊಮ್ಮೆಯಾದರೂ ಸಾವಿದನ್ನು ಅನಿವಾರ್ಯವಾಗಿ ಬದಲಾಯಿಸಲೇ ಬೇಕಾಗುತ್ತದೆ ಎಂದರೆ ಫ್ಯಾಷನ್ ಶಾಶ್ವತವಲ್ಲ, ಚಿರಂತನವಲ್ಲ; ನಶ್ವರ, ಚಂಚಲ, ಅತಿ ಚಂಚಲ. ಆದ್ದರಿಂದಲೇ ಪ್ರತಿಯೊಬ್ಬರೂ ಹಿಂದಿನ ಫ್ಯಾಷನ್‌ಗಳನ್ನು ಕಂಡು ನಗುತ್ತಾರೆ, ಗೇಲಿ ಮಾಡುತ್ತಾರೆ. ಆದರೆ ಅವರೇ ಹೊಸ ಫ್ಯಾಷನ್‌ಗಳನ್ನು ಚಾಚೂ ತಪ್ಪದೆ ಪಾಲಿಸಲು ಹೆಣಗುತ್ತಾರೆ, ಅಹರ್ನಿಶಿ ಹೋರಾಡುತ್ತಾರೆ.

ಫ್ಯಾಷನ್ನಿನ ಧ್ಯೇಯೋದ್ದೇಶಗಳಾದರೂ ಏನು?

ಗುಂಪಿನಲ್ಲಿ ತಾನೊಬ್ಬ ಅಥವಾ ತಾನೊಬ್ಬಳು ಮಾತ್ರ ಎದ್ದು ಕಾಣಬೇಕು ಎನ್ನುವುದೇ ಪ್ರತಿಯೊಬ್ಬ ಫ್ಯಾಷನ್ ಪ್ರಿಯನ, ಫ್ಯಾಷನ್ ಪ್ರಿಯಳ ಜೀವನದ ಹೆಬ್ಬಯಕೆ, ಪರಮೋದ್ದೇಶ. ವಕ್ರವಾಗಿ ತೋರಿದರೂ ಪರವಾಯಿಲ್ಲ, ಆದರೆ ಎದ್ದು ಕಾಣಬೇಕು. ಆದ್ದರಿಂದಲೇ ಅಲ್ಲವೇ ನಮ್ಮ ಮುದ್ದು ಗಣಪತಿಗೆ ಆನೆಯ ಮುಖ? ಬ್ರಹ್ಮನಿಗೆ ನಾಲ್ಕು ಮುಖಗಳು ಶಿವನಿಗೆ ಹಣೆಯಲ್ಲಿ ಮೂರನೆಯ ಕಣ್ಣು? ಇನ್ನಿತರ ಕೋಟ್ಯಾಂತರ ದೇವದೇವಿಯರಿಗೆ ತಮ್ಮವೇ ಆದ ಖಾಸಗಿ ವಾಹನಗಳು? ಆಯುಧಗಳು? ಅಲಂಕಾರಗಳು? ಇದಕ್ಕೆಲ್ಲ ಮೂಲ ಕಾರಣ ಫ್ಯಾಷನ್ ಬಗೆಗಿನ ಕಾಳಜಿಯೇ ಅಲ್ಲದೆ ಇನ್ನೇನು?

ಇದು ಫ್ಯಾಷನ್ ಯುಗ ಎನ್ನಲಾಗುತ್ತಿದೆ. ಆದರೆ ಇದೊಂದು ಪ್ರತ್ಯೇಕವಾದ ಯುಗವೇ ಅಲ್ಲ ಏಕೆಂದರೆ ಕೃತ ತ್ರೇತಾ ದ್ವಾಪರ ಮತ್ತು ಕಲಿ - ಈ ನಾಲ್ಕು ಯುಗಗಳಲ್ಲಿಯೂ ಫ್ಯಾಷನ್ ಅಂತರ್ಗತವಾಗಿದೆ, ಅವಿಭಾಜ್ಯ ಅಂಗದಂತೆ ಸೇರಿಕೊಂಡಿದೆ.

ಆದ್ದರಿಂದ ಫ್ಯಾಷನ್ನಿಗೆ ಯುಗಬೇಧವಿಲ್ಲ; ಜಾತಿ ಕುಲಮತ ಭಾಷಾ ಬೇಧಗಳೂ ಇಲ್ಲ. ಈ ಹಿನ್ನಲೆಯಲ್ಲಿ ಫ್ಯಾಷನ್ ಭಾವೈಕ್ಯ ರೂವಾರಿ, ಸರ್ವಧರ್ಮ ಸಮನ್ವಯದ ಪ್ರತೀಕ.

ಫ್ಯಾಷನ್ ಸರ್ವಾಂತರ್ಯಾಮಿ. ಆದರೂ ಇದು ಹೆಚ್ಚಾಗಿ ಕಂಡುಬರುವುದು, ಸ್ಫುಟವಾಗಿ ಗೋಚರಿಸುವುದು ಮಹಿಳಾ ವಲಯದಲ್ಲಿ. ಮಹಿಳೆ ಹೇಗೆ ಚಂಚಲೆಯೋ ಫ್ಯಾಷನ್ ಕೂಡ ಹಾಗೆಯೇ ಚಂಚಲ. ಮಹಿಳೆಗೂ ಫ್ಯಾಷನ್‌ಗೂ ಅಂಟಿದ ನಂಟಿನ ಕೊನೆ ಬಲ್ಲವರಾರೋ ಯಾರೂ ಅರಿಯರು. ಮಹಿಳೆಯರಿಗೆ ಫ್ಯಾಷನ್ ಹುಟ್ಟು ಅತಿ ಹೆಚ್ಚು. ಹೊಸ ಫ್ಯಾಷನ್ ಹೇಗಾದರೂ ಇರಲಿ. ಆದೇ ಅವರಿಗೆ ಅಚ್ಚು ಮೆಚ್ಚು. ಅವರ ಎಲ್ಲ ವೇಷಭೂಷಣಗಳಲ್ಲಿಯೂ, ಸಕಲ ಕಾರ್ಯಚಟುವಟಿಕೆಗಳಲ್ಲಿಯೂ ಫ್ಯಾಷನ್ನಿನ ದಶಾವತಾರಗಳನ್ನು ವೀಕ್ಷಿಸಬಹುದು. ಬಾಲಕಿಯರಿಂದ ಹಿಡಿದು, ವೃದ್ಧೆಯರವರೆಗೂ ಅದರ ಬಹುಮುಖ ಪ್ರಭಾವವನ್ನು ಕಾಣಬಹುದು.

ಒಂದೇ ಒಂದು ಉದಾಹರಣೆ: ಮ್ಯಾಚಿಂಗ್‌ಪೀಸ್ ಖರೀದಿ ಸಂದರ್ಭವನ್ನೇ ತೆಗೆದುಕೊಳ್ಳಿ. ಮಹಿಳೆಯರು ಯಾವುದೋ ಸೀರೆಗೆ ಯಾವುದೋ ಬ್ಲೌಸ್ ತೊಡುವುದಿಲ್ಲ, ಸೀರೆಗೆ ಸರಿಹೊಂದುವ ಮ್ಯಾಚಿಂಗ್ ಬ್ಲೌಸೇಬೇಕು. ಮ್ಯಾಚಿಂಗ್ ಬ್ಲೌಸ್‌ಪೀಸ್ ಹುಡುಕುವುದು ನನ್ನ ದೃಷ್ಟಿಯಲ್ಲಿ ಪ್ರಪಂಚದ ಅತಿ ಕಷ್ಟವಾದ ಸಾಹಸಗಳಲ್ಲಿ ಒಂದು. ಏಕೆಂದರೆ ನಮ್ಮಲ್ಲಿ ಎಷ್ಟು ಬಣ್ಣಗಳಿವೆ? ಆ ಬಣ್ಣಗಳ ನಡುವೆ ಎಷ್ಟು ಸೂಕ್ಷ್ಮಾತಿಸೂಕ್ಷ್ಮ ವ್ಯತ್ಯಾಸಗಳಿವೆ? ಒಂದೊಂದು ಬಣ್ಣದಲ್ಲಿಯೂ ನಸು, ಕಡು ಇತ್ಯಾದಿ ಎಷ್ಟು ಪ್ರಬೇಧಗಳಿವೆ? 9 ಬಣ್ಣಗಳನ್ನು ಕರಾರುವಾಕ್ ಆಗಿ ಗುರುತಿಸುವುದು ಸುಲಭವೇನೂ ಅಲ್ಲ. ಕಪ್ಪು ಹಾಗೂ ಬಿಳಿ ಬಣ್ಣಗಳನ್ನು ಖಚಿತವಾಗಿ ಗುರುತಿಸಬಹುದು. ನೀಲಿ ಹಳದಿ ಹಸುರುಗಳನ್ನು ಸುಮಾರಾಗಿ ಗುರುತಿಸಬಹುದು. ಇವುಗಳ ಉಪವರ್ಣಗಳನ್ನು ಗುರುತಿಸಲು ದಿವ್ಯ ದೃಷ್ಟಿಯೇ ಬೇಕು.

ಆದ್ದರಿಂದಲೇ ಎಷ್ಟೋ ಸಲ, ಸೀರೆಗೆ ಮ್ಯಾಚಿಂಗ್ ಬ್ಲೌಸ್‌ಪೀಸ್ ಸಿಕ್ಕದೆ, ಬ್ಲೌಸ್‌ಪೀಸ್‌ಗೇ ಮ್ಯಾಚಿಂಗ್ ಸೀರೆ ಹುಡುಕಬೇಕಾದ ಅನಿವಾರ್ಯ ಪ್ರಸಂಗ ಬರುತ್ತದೆ.

ಮ್ಯಾಚಿಂಗ್ ಹಾವಳಿ ಇಷ್ಟಕ್ಕೆ ಸೀಮಿತವಲ್ಲ. ಸೀರೆಗೆ ಮ್ಯಾಚಿಂಗ್ ಬ್ಲೌಸ್ ಅಥವಾ ಬ್ಲೌಸ್‌ಗೆ ಮ್ಯಾಚಿಂಗ್ ಸೀರೆ ಸಿಕ್ಕಿದ ಮಾತ್ರಕ್ಕೆ ಮಹಿಳೆಯರ ಫ್ಯಾಷನ್ ಸಮಸ್ಯೆ ಕೊನೆಗೊಳ್ಳುವುದಿಲ್ಲ. ಮ್ಯಾಚಿಂಗ್ ಹುಚ್ಚು ಮಹಿಳೆಯರು ಬಳಸುವ ಸಕಲ ಸರಕುಗಳಿಗೂ ತಗುಲಿದೆ. ಉದಾಹರಣೆಗೆ ಬಳೆ - ಬಳೆಬೇಡ, ಈ ಕಾಲದಲ್ಲಿ ಯಾವ ಮಹಿಳೆ ತಾನೇ ಬಳೆಗಳನ್ನು ಹಾಕಿಕೊಳ್ಳುತ್ತಾಳೆ - ವಾಚು, ಪರ್ಸು, ವ್ಯಾನಿಟಿಬ್ಯಾಗು, ಚಪ್ಪಲಿ, ಕುಂಕುಮ ಇತ್ಯಾದಿ ಇತ್ಯಾದಿ...

ಹೀಗಾಗಿ ಮ್ಯಾಚಿಂಗ್ ಫಿಲಾಸಫಿಯನ್ನು ಸಂಪೂರ್ಣ ಪಾಲಿಸುವ ಹೋರಾಟದಲ್ಲಿ, ಜೀವವೇ ತೇದುಹೋಗುವ ಸಾಧ್ಯತೆಯಿದೆ. ಆದರೆ ನೆನಪಿರಲಿ - ಜೀವಕ್ಕಿಂತಲೂ ಫ್ಯಾಷನ್ ಮಿಗಿಲು.

ಸೀರೆ ಬ್ಲೌಸ್ ವಾಚ್ ಪರ್ಸ್ ವ್ಯಾನಿಟಿಬ್ಯಾಗ್ ಮೊದಲಾದ ಎಲ್ಲ ವಿಷಯಗಳಲ್ಲಿಯೂ ಮ್ಯಾಚಿಂಗ್ ಫಿಲಾಸಫಿಯನ್ನು ಪ್ರಾಮಾಣಿಕವಾಗಿ ಅತ್ಯುತ್ಸಾಹದಿಂದ ಅನುಸರಿಸುವ ಮಹಿಳೆಯರೂ ಇಲ್ಲದೆ ಇಲ್ಲ ನಮ್ಮ ಬೀದಿಯಲ್ಲಿಯೇ ಪ್ರತಿನಿತ್ಯ ಓಡಾಡುವ ಒಬ್ಬಾಕೆ ಇವತ್ತು ಉಟ್ಟ ಸೀರೆಯನ್ನು ನಾಳೆ, ಏಕೆ, ಇನ್ನೊಂದು ವರ್ಷ ಬಳಸುವುದಿಲ್ಲ.

ಫ್ಯಾಷನ್‌ಗೆ ಲಿಂಗಬೇಧ ವಯೋಬೇಧಗಳೂ ಇಲ್ಲ. ಫ್ಯಾಷನ್ ಹುಚ್ಚು ನಡು ವಯಸ್ಸಿನವರನ್ನು ಬಿಟ್ಟಿಲ್ಲ. ಇಳಿ ವಯಸ್ಸಿನವರನ್ನು ಕಾಡದೆ ಇಲ್ಲ. ಹದಿ ಹರೆಯದವರಿಗೆ ಈ ರೋಗ ಉಲ್ಬಣಗೊಳ್ಳುತ್ತದೆ. ಅಷ್ಟೇ ಇವರು ಹೊಸ ಫ್ಯಾಷನ್ ಅನುಸರಿಸಲು ಇಳಿ ವಯಸ್ಸಿನವರಂತೆ ಹಿಂದೇಟು ಹಾಕುವುದಿಲ್ಲ. ಕೂಡಲೇ ಹೊಸ ಫ್ಯಾಷನ್‌ಗಳನ್ನು ಹಾರ್ದಿಕವಾಗಿ ಸ್ವಾಗತಿಸುತ್ತಾರೆ, ಒಪ್ಪಿ ಸ್ವೀಕರಿಸುತ್ತಾರೆ. ಆದ್ದರಿಂದಲೇ ಎಷ್ಟೋ ಬಾರಿ ಲಿಂಗಬೇಧವನ್ನು ಗುರುತಿಸುವುದು ಕಷ್ಟವಾಗುತ್ತದೆ ಈ ಸಂದರ್ಭದಲ್ಲಿ ಹಳೆಯ ಜೋಕ್ ಒಂದು ನೆನಪಿಗೆ ಬರುತ್ತಿದೆ ಕೇಳಿ:

'ಏನಪ್ಪಾ? ನೀನು ಇವರ ಮಗನೇ?'

''ಅಲ್ಲ; ಮಗಳು''

''ಅಂದರೆ ಇವರು ನಿನ್ನ ತಂದೆ?''

''ಅಲ್ಲ ತಾಯಿ''

ಆದರೆ ಕೆಲವು ಫ್ಯಾಷನ್‌ಗಳು ಕೆಲವು ವೃತ್ತಿಗಳಿಗಷ್ಟೇ ಅಂಟಿಕೊಂಡಿರುವುದೂ ಉಂಟು. ಸಾಹಿತಿಗಳಿಗೆ ಗಡ್ಡ, ರಾಜಕಾರಣಿಗಳಿಗೆ ಖಾದಿ, ಸ್ವಾಮೀಜಿಗಳಿಗೆ ಕಾವಿ ... ಹೀಗೆ ಇವನ್ನು ಫ್ಯಾಷನ್ ಎನ್ನದೇ ಯೂನಿಫಾರಂ ಅನ್ನಬಹುದೇನೋ... ಆದರೆ ಯೂನಿಫಾರಂ ನಂತೆ ಇವು ಐಕ್ಯವನ್ನು ಸೂಚಿಸದೆ ಇರುವುದು ಮಾತ್ರ ದುರದೃಷ್ಟಕರ.

ಫ್ಯಾಷನ್ ಮಿಂಚಿನ ವೇಗದಲ್ಲಿ ಓಡುತ್ತ ಇರುತ್ತದೆ. ತರುಣರು ತೊಡುವ ಟೀಕಾಫಿ, ಮಾಲ್ಕ್ ಇತ್ಯಾದಿ ಷರ್ಟ್‌ಗಳನ್ನು ಗಮನಿಸಿ; ಅವರು ತೊಡುವ ಪ್ಯಾಂಟ್ ಷರ್ಟ್‌ಗಳಲ್ಲಿನ ಅನೇಕಾರ್ಥಗಳುಳ್ಳ ಶಾಸನಗಳನ್ನು ಗಮನಿಸಿ; ತರುಣಿಯರು

ತೊಡುವ ಬ್ಲೌಸ್‌ಗಳ ಯು,ಎ,ಡಬ್ಲ್ಯು ಇತ್ಯಾದಿ ನೆಕ್‌ಗಳನ್ನು ಗಮನಿಸಿ; ಅವರು ತಮ್ಮ ಹಣೆಗೆ ಅಂಟಿಸಿಕೊಳ್ಳುವ ಸ್ಟಿಕ್ಕರ್‌ಗಳ ಆಕಾರ, ಗಾತ್ರಗಳನ್ನು ಗಮನಿಸಿ; ಇಳಿ ವಯಸ್ಸಿನವರು ಗಾಳಿ ಸಂಚಾರಕ್ಕೆ ಹೊರಡುವಾಗ ತಪ್ಪದೆ ಹಿಡಿದುಕೊಳ್ಳುವ ಆಸರೆ ಕೋಲುಗಳನ್ನು, ವಾಕಿಂಗ್ ಸ್ಟಿಕ್‌ಗಳನ್ನು ಗಮನಿಸಿ.

ಹೀಗೆ ನೀವು ಯಾವುದನ್ನೇ, ಯಾರನ್ನೇ ಗಮನಿಸಿದರೂ, ಅಲ್ಲ ಫ್ಯಾಷನ್ನಿನ ಒಂದಂಶ ಖಂಡಿತವಾಗಿಯೂ ಗೋಚರಿಸುತ್ತದೆ. ಆದ್ದರಿಂದಲೇ ಹೇಳಿದ್ದು. 'ಫ್ಯಾಷನ್ ಸರ್ವಾಂತರ್ಯಾಮಿ' 'ಸರ್ವಂ ಫ್ಯಾಷನ್‌ಮಯಂ ಜಗತ್' ಎಂದು.

'ಹಿಸ್ಟರಿ ರಿಪೀಟ್ಸ್ ಇಟ್‌ಸೆಲ್ಫ್' ಎಂಬಂತೆ ಫ್ಯಾಷನ್ ಆಲ್ವೋ ರಿಪೀಟ್ಸ್ ಇಟ್‌ಸೆಲ್ಫ್' ಆದ್ದರಿಂದಲೇ ನಿನ್ನೆಯ ಫ್ಯಾಷನ್ ಇಂದು 'ಜಟ್ ಆಫ್ ಫ್ಯಾಷನ್' ಆಗಿರುತ್ತದೆ. ಇವತ್ತು 'ಔಟ್ ಆಫ್ ಫ್ಯಾಷನ್' ಆಗಿರುವುದು ನಾಳೆ ಮತ್ತೆ ಹೊಸ ಫ್ಯಾಷನ್ ಆಗುವ ಸಾಧ್ಯತೆಯಿರುತ್ತದೆ. ಆದ್ದರಿಂದ ನಿಜವಾದ ಫ್ಯಾಷನ್ ಯಾವುದೆಂದು ತಿಳಿಯದೆ ನಾವು ತಬ್ಬಿಬ್ಬಾಗುತ್ತೇವೆ. ನಿಜವಾದ ಫ್ಯಾಷನ್ನನ್ನು ಹಿಡಿದೂ ಅಪ್ಪಿಕೊಳ್ಳುವ ಹಂಬಲದಿಂದ ಫ್ಯಾಷನ್‌ಗಳ ಹಿಂದೆ ಧಾವಂತದಿಂದ ಧಾವಿಸುತ್ತೇವೆ. ಅದು ನಮ್ಮ ಕೈಗೆ ಸಿಗದೆ ತಪ್ಪಿಸಿಕೊಂಡಾಗ ಫ್ಯಾಷನ್ನನ್ನೇ ವಿರೋಧಿಸತೊಡಗುತ್ತೇವೆ (ಹೀಗೆ ಫ್ಯಾಷನ್ ಅನ್ನು ವಿರೋಧಿಸುವುದು ಕ್ರಮೇಣ ಒಂದು ಥರದ ಫ್ಯಾಷನ್ನೇ ಆಗುತ್ತದೆ)

ಈ ಸಂದರ್ಭದಲ್ಲೊಂದು ನೀತಿಮಾತು. ಫ್ಯಾಷನ್‌ಗೂ ಒಂದು ಮಿತಿ ಇದ್ದರೆ ಚಲೋ ಏಕೆಂದರೆ 'ಎಲ್ಲ ಬಣ್ಣವನ್ನು ಮಸಿ ನುಂಗಿತು' ಎಂಬ ಗಾದೆಯಂತೆ, ಎಲ್ಲ ಸಹಜ ಸೌಂದರ್ಯವನ್ನು ಈ ಕೃತಕ ಫ್ಯಾಷನ್ ಭೂತ ನುಂಗಿ ನೀರು ಕುಡಿಯಬಾರದಲ್ಲ?

ಕೊನೆಯ ಕುಟುಕು:

ತಂತ್ರಜ್ಞಾನದ ಅಭಿವೃದ್ಧಿಯಿಂದಾಗಿ ಸಾಧನೆಗಳಿಂದಾಗಿ, ಸಂಪರ್ಕ ಕ್ಷೇತ್ರದಲ್ಲಿ ಉಂಟಾಗಿರುವ ಕೆಲವು ಬದಲಾವಣೆಗಳೂ ರೂಢಿಗೆ ಸಂಬಂಧಿಸಿದ ಹೊಸ ಹೊಸ ಫ್ಯಾಷನ್‌ಗಳಿಗೆ ಕಾರಣವಾಗುತ್ತಿವೆ. ಉದಾಹರಣೆಗೆ ಮೊದಲು ಪೋಸ್ಟ್‌ಕಾರ್ಡ್, ಇನ್‌ಲ್ಯಾಂಡ್ ಇತ್ಯಾದಿ. ಅನಂತರ ಫೋನ್ ಆಮೇಲೆ? ಆಮೇಲೇನು?

ಈ-ಮೇಲ್ ತಿಳಿಯದ ನನ್ನಂತಹವರೆಲ್ಲ ದಂಡಪಿಂಡಗಳು ಸ್ವಾಮೀ ದಂಡಪಿಂಡಗಳು

★★★

ಅವರವರ ಅಭಿರುಚಿ! (ಭಾವ!)

- ಅ.ರಾ.ಸೇ.

ನಿನ್ನೆ ಮಧ್ಯಾಹ್ನ ನಮ್ಮ ಮನೆಯೆದುರಿನಲ್ಲಿರುವ ಅಂಗಡಿಗೆ ಹೋಗಿ ಸ್ವಲ್ಪ ಹೊತ್ತು ಕುಳಿತಿದ್ದೆ.

ಅಂಗಡಿಯ ಮೂಲಕ ರದ್ದಿ ಪೇಪರುಗಳನ್ನು ಖರೀದಿಸಿ ತಂದಿದ್ದ; ತೂಕ ಮಾಡಿ ಕೆಳಗೆಸೆಯುತ್ತಿದ್ದ. ಅದರ ನಡುವೆ ಕರಿ ಬಣ್ಣದ ರಟ್ಟು ಹಾಕಿದ್ದ ಕ್ರೌನ್ ಎಂಟನೇ ಒಂದರ ಗಾತ್ರದ ಪುಸ್ತಕ ಕಣ್ಣಿಗೆ ಬಿತ್ತು ಕೈಗೆತ್ತಿಕೊಂಡು ನೋಡಿದೆ.

ಅದು ಒಂದು ಸುಪ್ರಸಿದ್ಧ ಕನ್ನಡ ಪತ್ರಿಕೆಯೊಂದರ, ವಿಶೇಷಾಂಕವೊಂದರ ಜೊತೆಗೆ ಕಳಿಸಿದ್ದ ಉಚಿತ ಕಾದಂಬರಿ. ಅದನ್ನು ಬರೆದವರು ಆ ಪತ್ರಿಕೆಯ ಓದುಗರೆಲ್ಲರಿಗೆ ಪರಿಚಿತರಾದ ಒಬ್ಬ ಲೇಖಕರು: ಕವಿಗಳು. ಕಾದಂಬರಿಕಾರರು, ಪ್ರಗತಿಶೀಲ ಜನಪರ ಬರಹಗಾರರು.

ಪುಸ್ತಕವನ್ನು ತೆಗೆದೆ, ಪುಟ ಪುಟಗಳಲ್ಲೂ ಟಿಪ್ಪಣಿಗಳು ಕಂಡವು. ಕೆಲವು ಉದ್ಗಾರಗಳು, ಕೆಲವು ಪ್ರಶ್ನೆಗಳು. ಅವು ಲೇಖಕರನ್ನು ತಲುಪುವ ಸಾಧ್ಯತೆಯೇ ಇಲ್ಲ. ಕೆಲ ದಿವಸಗಳಲ್ಲೇ ಮಂಡಕ್ಕಿ ಖಾರವನ್ನೋ, ಚಕ್ಕುಲಿಯನ್ನೋ, ಬ್ರೆಡ್ಡನ್ನೋ ಕಟ್ಟಿಕೊಡಲು ಆ ಪುಟಗಳು ವಿನಿಯೋಗವಾಗಲಿದ್ದವು.

ಕಾದಂಬರಿ ಮುಗಿದಿತ್ತು. ಅದರ ಕೊನೆಯ ಪುಟದ ಹಿಂದೆ. ಬಣ್ಣ ಬಣ್ಣದ ಕ್ರೇಯಾನುಗಳಿಂದ ವರ್ಣರಂಜಿತ ಬರಹವೊಂದಿತ್ತು.

ಅದನ್ನು ಗಮನಿಸಿದೆ, 'ತೊಟ್ಟಿ ಕಾದಂಬರಿ' ಎನ್ನುವುದು ಆ ಬರಹ. ಕೆಳಗಡೆ ಸಹಿಯೂ ಇತ್ತು, ಮುಂದೆ ಓದುಗನ ಪದವಿಗಳ ವಿವರವೂ ಇತ್ತು.

ಸಂಪಾದಕರು ಆತನನ್ನು ಬೇಡಿಕೊಂಡರು. ಪ್ರಕಾಶಕರು ಅಚ್ಚುಹಾಕಿ ಉಚಿತ ಕೊಡುಗೆ ಕೊಟ್ಟರು. ಆತ ನೊಂದ ಜೀವಿಗಳ, ಮನೋವಿಶ್ಲೇಷಣೆ ಮಾಡಿ ಕರುಣಾರ್ದ್ರ ಬರಹವೊಂದನ್ನಿಟ್ಟ ಹಲವು ಪದವೀಧರನಾದ ಓದುಗ ಹೀಗೆ ಬರೆದ. ಎಂತಹ ಮನ ಕಲಕುವ ಘಟನೆ.

ಇದನ್ನೇಕೆ ಆರಿಸಿಕೊಂಡೆ ಎಂದರೆ ನಾನೂ ಬರಹಗಾರ, ಅನೇಕ ಪುಸ್ತಕ ಬರೆದಿದ್ದೇನೆ. ಲೇಖನಗಳನ್ನು ಬರೆದಿದ್ದೇನೆ. ಅದನ್ನು ಓದುವವರಾರೋ ಅರಿಯೆ! ಲೇಖನದ ಕೆಳಗಡೆ ಅವರು ತಮ್ಮ ಪ್ರತಿಭಟನೆಯನ್ನು ಹೇಗೆ ವ್ಯಕ್ತಪಡಿಸಿದ್ದರು?

ಹಲವು ಸಾಧ್ಯತೆಗಳನ್ನು ಮನಸ್ಸಿನಲ್ಲೇ ಮೆಲುಕು ಹಾಕಿದೆ. ಅವನ್ನು ಒಂದರ ಕೆಳಗೊಂದರಂತೆ ದಾಖಲಿಸಿದ್ದೇನೆ.

1. ಈ ಮಹಾನುಭಾವ (ಕಕವ) ಯಾರು!
2. ಇದನ್ನೇಕೆ ಪ್ರಕಟಿಸಿದರು.
3. ಕಚಡಾ ಬರಹ.
4. ತಲೆ ಬುಡ ತಿಳಿಯದ ಬರಹ.
5. ಈ ಲೇಖನ (ಪುಸ್ತಕ) ಹರಿದು ಹಾಕಿದರೂ ಸಿಟ್ಟು ಇಳಿಯುವುದಿಲ್ಲ.
6. ಏನೂ ಇಲ್ಲದ ಲೇಖನ, ಯಾಕಾದರೂ ಓದಿದೆನೋ.
8. ಕಗ್ಗಲ್ಲು ಬಂಡೆ
9. ಏನೂ ಅರ್ಥವಾಗುವುದಿಲ್ಲ.

ಈ ಸಾಧ್ಯತೆಗಳನ್ನು ನೆನೆ ನೆನೆದು ಮೈರೋಮಾಂಚಗೊಂಡಿತು. ಇಂಗ್ಲೀಷಿನಲ್ಲಿ ಹೇಳಿದರೆ "A writing which deeply stirs the minds of readers" ನನ್ನ ಬರಹದ ಮಹಿಮೆ!

ಯಾವುದೇ ಒಂದು ಬರಹ ಓದುಗನ ಮನ ಕಲಕಿದರೆ ಅದು ಸಾರ್ಥಕವಾದ ಹಾಗಲ್ಲವೇ?

ಇನ್ನು ವಿಮರ್ಶಕರ ಬರಹಗಳಾದರೂ ಅಷ್ಟೇ. ಸಾಧ್ಯತೆಗಳು ಹೀಗಿವೆ.

''ಬರೆಯದಿದ್ದರೆ, ಅಚ್ಚಾಗದಿದ್ದರೆ ಈ ಪುಸ್ತಕ/ಲೇಖನ/ಕವನ, ಅರ್ಥಪೂರ್ಣವಾಗುತ್ತಿತ್ತು.''

ಇದೇ ಸಂದರ್ಭದಲ್ಲಿ ಭಾಷಣಗಳಲ್ಲಿ ಕೇಳುವ, ಲೇಖನಗಳಲ್ಲಿ ಬರುವ ಅತ್ಯಂತ ಜನಪ್ರಿಯವಾದ ಕೆಲವು ಕ್ಲೀಷೆಗಳನ್ನು ಉದಾಹರಿಸಿದರೆ ತಪ್ಪಾಗಲಾರದು.

1. ಇರುವುದು ಆರೇ ಜೋಕುಗಳು.

   ಯಾರೋ ಎಲ್ಲೋ ಬರೆದಿದ್ದರು. ಇಲ್ಲೊಬ್ಬನು ಅದನ್ನು ಹೇಳಿದ, ಸಾಮೂಹಿಕ ಸನ್ನಿ ಬಡಿದು ಇದೊಂದು ಸಿದ್ಧಾಂತವಾಯಿತು.

2. ಒಂದು ವ್ಯಂಗ್ಯ ಚಿತ್ರವು ಹನ್ನೆರಡು ಲೇಖನಗಳಿಗೆ ಸಮ.

   ಈ ವೈರಸ್ ಕೆಲವು ದಶಕಗಳ ಹಿಂದೆ, ಕೆಲವು ಹಾಸ್ಯ ಸಾಹಿತ್ಯ ಪ್ರಿಯರಿಗೆ ಬಡಿಯಿತು. ಪ್ರಾರಬ್ಧ.

ವ್ಯಂಗ್ಯ ಚಿತ್ರಗಳ ಕೆಳಗೆ ಒಳಗೆ ಬರಹಗಳೇಕಿರುತ್ತವೆ? ಒಂದೇ ವಾಕ್ಯ ಹತ್ತು ವ್ಯಂಗ್ಯ ಚಿತ್ರಗಳಿಗೆ ಸಮ ಎಂದೇಕೆ ಯೋಚಿಸುವುದಿಲ್ಲ!

3. ಶ್ರೀಯುತರು ಹಾಸ್ಯವನ್ನು ತುಂಬಾ ಗಂಭೀರವಾಗಿ ಹೇಳಿದರು....

ಹಾಸ್ಯ ಮಷ್ಕಿರಿಯಲ್ಲ ಅಂತ ಹೀಗೆ ಹೇಳಿದವರಿಗೆ ಏಕೆ ಗೊತ್ತಾಗಿಲ್ಲ? ಅಂದಹಾಗೆ ಹಾಸ್ಯ ಗೋಷ್ಠಿಯಲ್ಲಿ ಮುಗ್ಗಲು ಗಂಭೀರ ಸಾಹಿತಿಗೇನು ಕೆಲಸ?

4. ಹಾಸ್ಯವು ಸಾಹಿತ್ಯ ಪ್ರಾಕಾರದಲ್ಲಿ ಪರಿಗಣಿತವಾಗುವುದಿಲ್ಲ.

ಹೀಗೆಂದು ಹೇಳುವ ವಿಮರ್ಶಕರನ್ನು ಕಂಡು ನಗಬೇಕಷ್ಟೇ. ಅಂಕಣ, ಕೃತಿ ಚೌರ್ಯ, ಪ್ರಭಾವಗಳಿಂದ ಪ್ರಶಸ್ತಿ ಪಡೆದವರ ಲೇಖನಗಳನ್ನು ಕುರಿತು ಪುಟಗಟ್ಟಲೆ ಬರೆಯುವ ಪ್ರಭೃತಿಗಳ ಗಂಭೀರ ಸಿದ್ಧಾಂತವಿದು.

5. ಕನ್ನಡದ ಉದ್ದಾಮ ಪಂಡಿತರೂ, ವಿಮರ್ಶೆಯಲ್ಲಿ ನಿಪುಣರೂ ಆದ ನನ್ನ ಗುರುಗಳನ್ನು ಕುರಿತು ಒಂದು ಪ್ರಶ್ನೆ ಕೇಳಿದೆ.

'ಮಹಾಕಾವ್ಯ ಎಂದರೇನು'

ಅವರು ಕಣ್ಣನ್ನು ಮಿಟುಕಿಸದೆ ಉತ್ತರಿಸಿದರು.

'ಅದು ಕಾವ್ಯದ ತೂಕದ ಪ್ರಶ್ನೆ'

ಇಲ್ಲಿಗೆ ಈ ಕ್ಲೀಷೆಗಳ ಸುದ್ದಿ ಸಾಕು.

ಒಂದು ವಿಪರ್ಯಾಸವನ್ನು ನಾವು ಗಂಭೀರವಾಗಿ ಚಿಂತಿಸಬೇಕು.

ಹಿಂದೊಂದು ಕಾಲದಲ್ಲಿ ಪಂಪ, ರನ್ನ, ಪೊನ್ನ, ಜನ್ನ ಇತ್ಯಾದಿಗಳೆಲ್ಲ ರಾಜಾಶ್ರಯದಲ್ಲಿ ಬೆಳೆದವರು. ಅವರ ಪ್ರಜ್ಞೆ ಪಕ್ಕಾ ಅಲ್ಲ ಅನ್ನುತ್ತಿದ್ದರು.

ಕನ್ನರ ನಾದರದಿಂ ಕೊಡೆಪೊನ್ನಂ, ಮನಮೊಸೆದು ತೈಲಪಂ ಕೊಡೆ ರನ್ನಂ, ಮನ್ನಿಸಿ ಬಲ್ಲಾಳಂ ಕೊಡೆ ಜನ್ನಂ ಕವಿ ಚಕ್ರವರ್ತಿ ಪೆಸರಂ ಪಡೆದರ್.

ಈಗ ಏನಾಗಿದೆ? ಅದೇ ಚರಿತ್ರೆಯ ಪುನರಾವರ್ತನೆ, ಸರ್ಕಾರಗಳು ಕೊಡುವ ಪ್ರಶಸ್ತಿಗೆ ಮುಗಿಬಿದ್ದ ಬರಹಗಾರರ ಕ್ಯೂಗಳೇ ಈ ಪ್ರಶ್ನೆಗೆ ಉತ್ತರ. ಸಿಕ್ಕಷ್ಟೇ ಸೀರುಂಡೆ (ಇದು ಸರಿಯಾದ ಶಬ್ದವಲ್ಲ, ಅದು ಬೇರೆ) .....ಲ್ಲಿ ಉಂಡವನೇ ಜಾಣ... ಇದಕ್ಕೆ ಸಂಬಂಧಿಸಿದ ದಾರಿದೀಪಗಳು.

★★★

ಗುಂಡಾವತರಣ - 18

ಜೈ ಗುಂಡೇಶ!... ಬೈ, ದಡದಳ್ಳಿ

- ಎಸ್ಸಾರ್ಮೂರ್ತಿ

ಆಗಿರೋದಿಷ್ಟು...

ಟಾಟಾ ಇನ್‌ಸ್ಟಿಟ್ಯೂಟ್ ಫಿಜಿಕ್ಸ್ ಪ್ರೊಫೆಸರ್ ರಂಗಣ್ಣ ಅಕಸ್ಮಾತ್ ಭೇಟಿಯಾದ ಬಾಲ್ಯ ಸ್ನೇಹಿತ ಗುಂಡಣ್ಣ (ಗುಂಡೇಶ್ ದಡದಳ್ಳಿ)ನ ಟೀವಿ ಧಾರಾವಾಹಿಯಲ್ಲಿ ಹೆಂಡತಿ ಸರಸೂವಿನ ಬಲವಂತಕ್ಕಾಗಿ ನಟಿಸಿ, ಒಂದೇ ಸೀನಿನಲ್ಲಿ ಸಾಯುವ ಪಾತ್ರ ವಹಿಸಿದ. ಆದರೂ ಆ ಪ್ರಸಂಗದಲ್ಲಿ ಭೇಟಿಯಾದ ಸನ್ಮಿತ್ರರ ಮುಖಾಂತರ ಒಂದು ಕಲಾತ್ಮಕ ಚಿತ್ರದಲ್ಲಿ ಪಾತ್ರವಹಿಸಿದ ಪತಿಪತ್ನಿಯರಿಬ್ಬರಿಗೂ ನಟನಾ ಪ್ರಶಸ್ತಿಗಳು ದೊರಕಿಬಿಟ್ಟುವು. ಸರಸುವಿನ ಸಮಾಜದವರು ದಂಪತಿಗಳನ್ನು ಸನ್ಮಾನಿಸಲು ಸಿದ್ಧತೆ ನಡೆಸಿದರು.

ಮುಂದಕ್ಕೋದ್ಕಳಿ...

ತನ್ನ ಮುಖ ನೋಡಿದ ಪ್ರೊ|| ರಂಗನಿಗೆ ಡಾ|| ಸಿಂಗರು ವಿಷಯ ತಿಳಿಸಿದರು: ಭಾರತದ ವೈಜ್ಞಾನಿಕ ಪ್ರಗತಿಯ ಕುರಿತು ಕನ್ನಡದಲ್ಲೂ ಒಂದು 'ಡಾಕ್ಯುಮೆಂಟರಿ' ತಯಾರಿಸಲು ಕೇಂದ್ರ ಸರ್ಕಾರದ ಆದೇಶವಿತ್ತು. ಇದಕ್ಕಾಗಿ ನೇಮಕವಾಗಿದ್ದ ಸಮಿತಿಯಲ್ಲಿ ಏಳು ಮಂದಿ ತಮಿಳಿನವರು (ಇನ್‌ಸ್ಟಿಟ್ಯೂಟಿನ ಐವರು ಪ್ರೊಫೆಸರುಗಳೂ ಸೇರಿದ್ದರು), ಉಳಿದವರಲ್ಲಿ ಹಿಂದಿ (ಇಬ್ಬರು), ಬಂಗಾಳಿ, ತೆಲುಗು ಭಾಷಾ ಪ್ರವೀಣರೂ ಇದ್ದರು.

ಕನ್ನಡದಲ್ಲೇ ಏಕೆ? - 'ಏಳು ಜ್ಞಾನಪೀಠ ಪ್ರಶಸ್ತಿ ಗಳಿಸಿದ ಸಮೃದ್ಧ ಭಾಷೆ'

ಮತ್ತೆ ಬೆಂಗಳೂರು? - ಹೆಮ್ಮೆಯ ಕರ್ನಾಟಕದ ಭಾಷೆಯನ್ನು ಆ ಊರಿನಲ್ಲಿ ಇನ್ನೂ ಅನೇಕರು ಉಪಯೋಗಿಸಬಲ್ಲರೆಂಬ ಅಂಶವನ್ನು ಕೇಂದ್ರದ ದಕ್ಷ ಅಧಿಕಾರಿ ಇಂಟರ್‌ನೆಟ್ ಮುಖಾಂತರ ಕಂಡುಹಿಡಿದಿದ್ದರು (ಸಹಾಯ: ಆಂಧ್ರಪ್ರದೇಶದ ಡಾ|| ಗಾರ್ಲದಿನ್ನುಲ ಸೀತಾರಾಘವ ರಾಧಾಕೃಷ್ಣ ಲಕ್ಷ್ಮೀವೆಂಕಟೇಶ್ವರ ಪ್ರಸಾದರಾವ್) ಅಲ್ಲದೆ ಮೀಟಿಂಗ್ ನಡೆಸಲು (ಆಗಾಗ್ಗೆ) ಉತ್ತಮ ಹವೆ, ಮೀಟಿಂಗುಗಳಿಗೆ ದಯ ಮಾಡಿಸುವ ಸದಸ್ಯ - ಸತಿ, ಸುತೆಯರಿಗೆ ಸಿಲ್ಕ್ ಸ್ಯಾರಿ ಕೊಳ್ಳಲು ಅವಕಾಶಗಳು ಬೇಡವೇ?

ಕನ್ನಡ ಕಲಿಯದವರ ಈ ಸಮಿತಿಗೆ ಕನ್ನಡದ ಏಕೈಕ ಕಲಿಯಾಗಿ ಚಿತ್ರ ಪ್ರಶಸ್ತಿ ವಿಜೇತ ರಂಗಣ್ಣನ ಹೆಸರು ನುಸುಳಿಕೊಂಡಿತ್ತು. ತಿಂಗಳಿಗೆರಡು ಮೂರು ಮೀಟಿಂಗ್ ನಡೆಸುತ್ತ ಬಡ್ಜೆಟ್ಟೇ ಇಲ್ಲದ ಭತ್ಯ ಹತ್ಯೆ ಮಾಡುತ್ತ ಮಿತಿಯಿಲ್ಲದ

ಜವಾಬ್ದಾರಿಗಳನ್ನು ಸಮಿತಿಯು ರಂಗಣ್ಣನಿಗೆ ಹೊರಿಸಿತು. ದರ್‍ಯಾನಾನಿಯವರ ಆಶ್ವಾಸನೆಯ ಮೇರೆಗೆ ಅವನೂ ಒಪ್ಪಿದ.

'ರಾಜ್ಯೋತ್ಸವ': ನಾಡು ನೀರಿಲ್ಲದೆ ಬರಡಾಗಲಿ, ನೆರೆಯ (ನೀರೆಯ?) ಹೊರೆಯಿಂದ ಕಾವೇರಿರಲಿ, ನವೆಂಬರ ಒಂದರಿಂದ ಆರಂಭವಾದ 'ರಾಜ್ಯೋತ್ಸವ' ವರ್ಷಾದ್ಯಂತ ವಿಜೃಂಭಿಸದಿರೆಂತೆಂಬರಯ್ಯ ನಾಡಮಂದಿ? ಅಂತೂ ಭಾರೀಸ್ತರದ ಸಮಾರಂಭದಲ್ಲಿ 'ಅಬಲೆಯರು' ತಂಡದವರಿಗೆ ಪ್ರಶಸ್ತಿ ಪ್ರದಾನವನ್ನು ಪೂರೈಸಲಾಯಿತು. ಸದಾ ಬಿಜಿಯಾದ ಮಂತ್ರಿವರ್ಯರು ಎರಡು ದೆಹಲಿ ಪ್ರವಾಸಗಳ ನಡುವೆ ಪ್ರಯಾಸದಿಂದ ಏರ್‌ಪೋರ್ಟ್ ದಾರಿಯಲ್ಲೇ ಒಂದು ಹಾಲಿನಲ್ಲಿ ಶಾಲು ಹೊದಿಸಿದರೆನ್ನಿ.

ಅಂದಿನ ಮುಂದಿನವಾರ ಸರಸೂ ಸಮಾಜದವರು ದಂಪತಿಗಳನ್ನು ಸನ್ಮಾನಿಸಿದರು. ಸ್ಥಳ? - ದೊಡ್ಡಣ್ಣ ಹಾಲ್. ಮುಖ್ಯ ಅತಿಥಿಯಾಗಿ ದಯಮಾಡಿಸಿದ್ದರು ಶ್ರೀಮತಿ ಮೇನಕಾ ಮಿತ್ರ (ಬರಹಗಾರ್ತಿ - ಬೈರಪ್ಪನವರು, ಅನಂತಮೂರ್ತಿ ಅಂತಹ ಲೇಖಕರ ಸಾಲಿನ ಮಧ್ಯೆ ಸೇರಲು ಐ ಆ್ಯಮ್ ಹಿಯರ್ ಎಂದು ಮುಂದೆ ಬಂದವರು) ಸಮಾರಂಭ ಬಯ್ಯೋ-ಡ್ಯಾಟಾಗಳಿಲ್ಲದೆ ಅದ್ದೂರಿಯಾಗಿಯೇ ನೆರವೇರಿತು. ಅಷ್ಟೇ ಅಲ್ಲ, ತುರ್ತು ಸಭೆ ನಡೆಸಿ, ಅವಿರೋಧವಾಗಿ ಆಯ್ಕೆಯಾದ ಸರಸುವಿಗೆ ಮೂರು ವರ್ಷ ಕಾಲ ಅಧ್ಯಕ್ಷಿಣಿಯ ಪಟ್ಟ ಕಟ್ಟಿಯೂ ಬಿಟ್ಟರು.

'ಅಬಲೆಯರ' ಪ್ರಶಸ್ತಿ ಸ್ವೀಕಾರ ನೋಡಲು ಆಫ್ರಿಕಾದಿಂದ ದರ್‍ಯಾನಾನಿಯವರ ತಂಗಿ, ತಂಗಿಯ ಕುಟುಂಬ - ಭಾವ ಸಲೂಜಾ ಮತ್ತು ಇಬ್ಬರು ಮಕ್ಕಳು - ಆಗಮಿಸಿದ್ದರು. ಸಾಹುಕಾರರು ಚಿತ್ರೀಕರಣದ ತಂಡದವರಿಗಾಗಿ ಒಂದು ಸಂತೋಷಕೂಟವನ್ನು ಏರ್ಪಡಿಸಿದರು. ಈ ಕೂಟಕ್ಕೆ ಬರಲು ರಂಗಣ್ಣ - ಸರಸೂಗೆ ತಮ್ಮ ಕಾರನ್ನು ಕಳಿಸಿದ್ದರು. ದಂಪತಿಗಳು ಆ ವಾಹನದಲ್ಲಿ ಹೊರಟಾಗ ಶೇಷಾದ್ರಿಪುರದ ಪೋಲೀಸ್ ಸ್ಟೇಷನ್ನಿನ ಮುಂದೆ ಒಬ್ಬ ವ್ಯಕ್ತಿ ಹಳೇ ಸ್ಕೂಟರನ್ನು ರಿಪೇರಿ ಮಾಡಿಕೊಂಡು ಕೂತಿದ್ದ; ಪರಿಚಿತ ಹಾಗೆ ಕಂಡ. ಹತ್ತಿರ ನಿಲ್ಲಿಸಿ ನೋಡಿದರೆ ಗುಂಡಣ್ಣ! ಇವರನ್ನು ನೋಡಿ ಮೂವತ್ತೆರಡೂ ಹಲ್ಲು ಕಿರಿದು ಹೇಳಿದ:

'ಗಾಡಿ ರಿಬ್ಚಾಯ್ತು, ಪ್ಲಗ್ ಊದ್ಕತಾ ಕೂತೆ... ನೀನು ಚೆಂದಾಗಿದೀಯಾ ಗುರೂ? ಓ! ಮೇಡಮ್ಮಾವ್ರೂ ಅವ್ರೆ'

ರಂಗಣ್ಣ ಪ್ರಶ್ನಿಸುವ ಮೊದಲೇ ಉತ್ತರಿಸಿದ: 'ನನ್ಮಗ ಸಿದ್ಲಿಂಗು ಇಂದ ಸೂಟಿಂಗೆಲ್ಲ ಕಟ್ಟಾಯ್ತು ಗುರೂ. ಇದ್ದ ಬದ್ದ ಫೈನಾನ್ಸ್ ಎಲ್ಲ ಆ ಮಾಯಾ ಎಂಗ್ಸು ಅಡ್ವಾನ್ಸ್ ತಕಂಡು ಮದರಾಸಿಗೆ ಗಾಡಿ ಬಿಟ್ಲು. ಮಕ್ಕಲ್ಲು ಸೇಟ ನನ್ನೇ

ಗೋಮಟೇಸನ ತರ ನಿಲ್ಸಿ ಕೈ ಬಿಟ್ಬಾಕ್ದ. ಯಾಕೋ ಈ ಫೀಲ್ಡೇ ಸರಿ ಬರ್ಲಿಲ್ಲ. ಬ್ಯಾರೆ ಏನಾರಾ ಕೆಲ್ಸ ನೋಡ್ಕಳಾದೇ ವಾಸಿ. ನಿಮ್ಮನೇಗೇ ಬತ್ತೀನಿ ಗುರು. ಏನಾರಾ ದಂದೆ ನೀನೇ ಏಳ್ಕೊಡೀವಂತೆ' ಎಂದು ಅಳಲು ತೋಡಿಕೊಂಡ.

'ನೀನು ಸಿದ್ಲಿಂಗೂಗೆ ದಂಡ ತೆತ್ತೆ ಅಲ್ವಾ?' ಎಂದು ಕೇಳಿದ ರಂಗಣ್ಣನಿಗೆ ಗುಂಡ ಹೇಳಿದ:

'ಒಂದ್ಸೈನೂರು ಬಿಸಾಕಿ, 'ಊ ಆ ಅಂದ್ರೆ, ಆ ಜಿಮ್ ನಡಸ್ತಾನಲ್ಲ ಡಿಸೋಜ, ಅವನಿಗೆ ಐನೂರು ಎಸೀತೀನಿ, ನೀನು ಸಾಯೋಗಂಟ ಶನಿದೇವರ ಗುಡಿ ತಾವ ಬಿಕ್ಸಾ ಬೇಡ್ತಾ ಕುಂತ್ಕತೀಯ, ಎಲ್ಡೂ ಕಾಲಿರ್ಲ್ದೆ, ಅಂತೇಳಿ ಓಡಿಸಿಬುಟ್ಟೆ ಅವನ್ನ'. ಒಂದೇ ಕಿಕ್ಕಿಗೆ ಸ್ಕೂಟರು ಸ್ಟಾರ್ಟಾಯಿತು.

'ಇವನು ಅದೇ ಗುಂಡನೇ!' ಎಂದು ಯೋಚಿಸಿ ದಂಪತಿಗಳು ಪಾರ್ಟಿಗೆ ನಡೆದರು.

ಸ್ವಲ್ಪ ತಡವಾಗಿಯೇ ಆಗಮಿಸಿದ ಸಲೂಜಾ ಸಂಸಾರವನ್ನು ಸ್ವಾಗತಿಸಲು ಬಾಗಿಲ ಬಳಿಗೈದ ಯಜಮಾನರು ಆ ಪಾರ್ಟಿಯ ಜೊತೆಗಿದ್ದ ವ್ಯಕ್ತಿಯನ್ನು ಕಂಡು ಅವಾಕ್ಕಾದರು... ಗುಂಡಣ್ಣ! ತಾನು ಎತ್ತಿಕೊಂಡಿದ್ದ ಹುಡುಗನನ್ನು ಕೆಳಗಿಳಿಸಿ ನಕ್ಕ, ಗುಂಡ.

ಶ್ರೀಮತಿ ರಾಧಾ ಸಲೂಜಾ ಉದ್ವೇಗದಿಂದ ವಿವರಿಸಿದಳು: 'ರಾಜ ಮಹಲ್ಲಿನಲ್ಲಿ ತಮ್ಮ 'ಸೈಟು - ಸೀಯಿಂಗ್' ಮುಗಿಸಿ ಮನೆಯ ಪ್ಲಾನು ಹಾಕುತ್ತ ದಂಪತಿಗಳು ಸ್ಯಾಂಕಿ ಟ್ಯಾಂಕಿನ ದಂಡೆಯಲ್ಲಿ ಆಸೀನರಾಗಿದ್ದರು. ಅವರ ಚಿರಂಜೀವಿ, ತಂಗಿಗೆ ನೀರಿನ ಆಳ ತೋರಿಸುತ್ತೇನೆಂದು ಕೆರೆಗಿಳಿದ. ಮುಳುಗುವಂತಾದ. ತಂಗಿ ಕೂಕ್ಕೋತು. ಎಂದಿನಂತೆ ಜನಸ್ತೋಮ ಸೇರಿಕೊಂಡು ಹೋ! ಹೋ! ಎಂದು ಕೂಗಾಡುತ್ತ, ಮುಳುಗೋರನ್ನ ಉಳಿಸುವ ಹದಿನಾರು ಸುಲಭ ವಿಧಾನಗಳನ್ನು ಪಟ್ಟಿಹಾಕಿ ಗಲಭೆಗೈದರು. ಆಗ ಗುಂಡೇಶ ಎಂಬ ಈ ವ್ಯಕ್ತಿ ಜೀವದ ಹಂಗುದೊರೆದು ನೀರಿಗೆ ಧುಮುಕಿ ಹುಡುಗನನ್ನು ಬಚಾವ್ ಮಾಡಿಬಿಟ್ಟ' ಎಂದು ಮುದ್ದು ಮಗನನ್ನು ತಬ್ಬಿಕೊಂಡಳು.

ಭಲೇ! ಪ್ರಶಸ್ತಿ ಗಳಿಸಿದ 'ಅಬಲೆಯರು' ಚಿತ್ರದಷ್ಟೇ ಅದ್ಭುತ ಸಿನಿಮಾ ಕಥೆ ಗುಂಡ ನಡೆಸಿದ್ದ! ಅವನನ್ನು ರಾಜ ಮರ್ಯಾದೆಯಿಂದ ಸ್ವಾಗತಿಸಿ ಕರೆತಂದರು. ಸನ್ಮಾನ್ಯ ಅಭ್ಯಾಗತನಾಗಿಬಿಟ್ಟ ಗುಂಡ,

'ಕೆಂಪಾಂಬುದ ಕೆರೆ ನೀರು ಕುಡ್ದುದ್ದು ಇವತ್ತು ಸಾರ್ಥಕ ಆಯ್ತು ಗುರೂ' ಎಂದ.

ತಮ್ಮ ಕುಲಪುತ್ರನಿಗೆ ಜೀವದಾನ ಮಾಡಿದ ಈತನಿಗೆ ಯಾವ ರೀತಿಯಲ್ಲಿ ಬೇಕಾದರೂ ಸಹಾಯ ಮಾಡಲು ಸಲೂಜಾ ಸಿದ್ಧರಾದರು. ದರ್ಯಾನಾನಿ ಮಾತ್ರ 'ಪಾರ್ಟಿ ಮುಗಿಯುವವರೆಗೆ ತಡೆಯಿರಿ' ಎಂದು ಸನ್ನೆಮಾಡಿ ರಂಗಣ್ಣನ ಕಿವಿಯಲ್ಲಿ ಏನೋ ಪಿಸುಗುಟ್ಟಿದರು. ನಂತರ ಇಬ್ಬರೂ ಒತ್ತಟ್ಟಿಗೆ ಮಾತನಾಡಿಕೊಂಡರು.

ಪಾರ್ಟಿ ಅಂತ್ಯಗೊಂಡಾಗ ಎಲ್ಲರನ್ನೂ ಕಲೆಹಾಕಿ ಕೆಲವು ನಿರ್ಧಾರಗಳನ್ನು ಯಜಮಾನರು ಘೋಷಿಸಿದರು:

1. ಪಟ್ಟೇ ರಾಮಚಂದ್ರ ನೇತೃತ್ವದಲ್ಲಿ, ಶಿವಾಜಿ - ಶೇಖರ ಸೇರಿದಂತೆ ಒಂದು ಖಾಯಂ ಫಿಲ್ಮ್ ಯೂನಿಟ್ ಪ್ರಾರಂಭ. ಹಣಕಾಸು ವ್ಯವಸ್ಥೆ: ಸಾಹುಕಾರರು, ಕುಟುಂಬ.
2. ಮೊದಲನೆಯ ನಿರ್ಮಾಣ: ರಂಗಣ್ಣನ ವೈಜ್ಞಾನಿಕ ಪ್ರಗತಿ ಡಾಕ್ಯುಮೆಂಟರಿ.
3. ರಂಗಣ್ಣ ಹಾಗೂ ಎಲ್ಲರ 'ಬಯಕೆ'ಯಂತೆ 'ಅಬಲೆಯರ' ಚಿತ್ರೀಕರಣ ಸಮಯದಲ್ಲಿ ರುಚಿಕರ ತಿಂಡಿ-ಊಟ ಸಪ್ಲಯಿಸಿದ ರುಸಿಂಗ (ಋಷ್ಯಶೃಂಗ)ನಿಗೆ ಸಾಹ್ಕಾರರ ಮನೆಯ ಕುಕ್ಕನಾಗಿ ಅಪಾಯಿಂಟ್‌ಮೆಂಟ್. ಜೊತೆಗೆ ಹೊಸ ಯೂನಿಟ್ಟಿನ ಲೊಕೋಷನ್ನುಗಳಿಗೆಲ್ಲ ಅವನದೇ ಕ್ಯಾಟರಿಂಗ್ ಸರ್ವಿಸ್.
4. ಇದೆಲ್ಲದರಿಂದ ಹೊರತಾಗಿ ಶ್ರೀ ಗುಂಡೇಶ್ ಅವರಿಗೆ ಇಂಡೋ-ಆಫ್ರಿಕನ್ ಎಕ್ಸಿಮ್ ಕಂಪೆನಿಯಲ್ಲಿ ಕಂಟೆಯಿನರ್‌ಗಳ ಉಸ್ತುವಾರಿ. ತಿಂಗಳಿಗೆ ಹನ್ನೆರಡು ಸಾವಿರ ಸಂಬಲ ಅವರು ಒಪ್ಪಿ ಕೆಲಸ ಮಾಡುವುದಾದರೆ.

ಗುಂಡ ಕವಲುದಾರಿಗೆ ತಲುಪಿದ್ದ. ಆಯ್ಕೆ ಬಲವಾದರೆ ಸರಿ, ಎಡವಿದರೆ? ರಂಗಣ್ಣ ಒಪ್ಪಿಕೋ ಎಂದು ಸನ್ನೆ ಮಾಡಿದ. ಆಯಿತು ಎಂದ ಗುಂಡ ಆಶ್ವಾಸನೆ ನೀಡಿದ.

'ಗುರೂ, ನನ್ನ ಲೈಫೇ ತಿರ್‍ಗಾಮುರ್‍ಗ ಆಗ್ತಿದೆ. ನಾ ಕುಡಿದ ಸ್ಯಾಂಕಿಕೆರೆ ನೀರಿನ ಉಪ್ಪನ್ನ ಸಾಹ್ಕಾರರ ಋಣ ಅಂದ್ಕೊಂಡು ಕೆಲ್ಸ ಮಾಡ್ತೀನಿ. ನಿನ್ನಂತೋರ ಆಸೀರ್ವಾದ ಗುರೂ'.

ರಂಗಣ್ಣ ಹರ್ಷಿಸಿದ. ಗುಂಡನ ಬಗ್ಗೆ ದರ್ಯಾನಾನಿಯವರ ಅಭಿಪ್ರಾಯ ಸತ್ಯವಾಗುವ ಕಾಲ ಬಂದಿತ್ತು. ಅವನು 'ಅದೀಗ ಸರಿ ಕಣೋ ಗುಂಡಣ್ಣ, ಅಂತೂ ನೀನು ಧೈರ್ಯಮಾಡಿ ನೀರಿಗೆ ಧುಮುಕಿದ್ದು ಒಳ್ಳೇ ಸಿನಿಮಾ ಕಥೆ ಥರಾ ಆಗ್ಬಿಡ್ತಲ್ಲ!' ಎಂದ.

ಗುಂಡ ಆ ಕಡೆ ಈ ಕಡೆ ನೋಡಿ ರಂಗಣ್ಣನ ಕಿವಿಯಲ್ಲಿ ಮೆಲ್ಲಗೆ ಪಿಸುಗುಟ್ಟಿದ: ''ನಾನಾಗಿ ಬೀಳ್ಲಿಲ್ಲ ಗುರು, ನನ್ನ ಇಂದ್ಗಡೆ ನಿಂತಿದ್ದ ಆ ನನ್ಮಗ ತಳ್ಬುಟ್ಟ'.

'ಯಾರು?'

'ಅವನೇ... ಆ ಸಿದ್ಲಿಂಗು; ಹಾಗಂತ ಈಗ ಅವನ್ನೂ ಬಯ್ಯಾಕಿಲ್ಲ. ಯಾಕೇಂದ್ರೆ, ಅದ್ರಿಂದ ಈಗ ಪರ್ಮೆಂಟ್ ಕೆಲ್ಸ ಸಿಕ್ತು ಅಲ್ವಾ? ಇನ್ಮೇಲೆ ಆ ಮಕ್ಕಳ ತಂಟೇನೇ ಬ್ಯಾಡ, ಗುರೂ' ಇಬ್ಬರೂ ನಕ್ಕರು.

'ಒಳ್ಳೇದಾಯ್ತು. "All is well that ends well' ಅಂತ ಇಂಗ್ಲೀಷಿನಲ್ಲಿ ಹೇಳ್ತಾರೆ ಇನ್ನು ಈ ಕೆಲಸ ಉಳಿಸಿಕೊಳ್ಳೋದು ನಿನ್ನ ಕೈಲಿದೆ' ಎಂದ ರಂಗಣ್ಣ.

'ಯಾವ ದೇವರ ಮುಂದೆ ಬೇಕಾದ್ರೂ ಪ್ರಮಾಣ ಮಾಡ್ತೀನಿ ಗುರೂ, ಆಯ್ತಾ?'

'ಯಡಿಯೂರು ಶ್ರೀ ಸಿದ್ಧಲಿಂಗೇಶ್ವರ ಸ್ವಾಮಿ ಹೆಸರು ಕೇಳಿದಿಯಾ?'

ಗೆಳೆಯರಿಬ್ಬರು ಮತ್ತಷ್ಟು ಗಹಗಹಿಸಿದಾಗ ಕೌತುಕವೇನೆಂದರಿಯಲು ಸ್ಯಾರಿಯ ಸೆರಗನ್ನು ಸರಿ ಮಾಡಿಕೊಳ್ಳುತ್ತ ಬಳಿ ಸಾರಿದಳು ಸರಸು. ರಂಗಣ್ಣನಿಂದ ಗುಂಡನ ಸಾಹಸದ ಗುಪ್ತ ಕಥೆಯನ್ನರಿತ ಮೇಲೆ ಅವಳೂ ನಗದೇ ಉಂಟೇ? ನಗುತ್ತಲೇ ಹೇಳಿದಳು:

'ಅಂತೂ ಜೈ ಗುಂಡೇಶ ಅಂತ ಜಯಭೇರಿ ಬಾರಿಸಿಬಿಟ್ಟಿರಿ ಅನ್ನಿ'.

'ಅಷ್ಟೇ ಅಲ್ಲ ಮೇಡಂ... ಇನ್ಮೇಲೆ ಆ ದಡದಳ್ಳಿ ಪ್ಪೋರಿಗಳಿಗೂ ಬೈಬೈ!' ಎಂದು ನುಡಿದ ಗುಂಡನ ಜೊತೆಯಲ್ಲಿ, ರುಸಿಂಗ ಕೈಗೇ ತಂದಿತ್ತ ಐಸ್‌ಕ್ರೀಂ ವಿಚಾರಣೆ ಆರಂಭಿಸಿದರು, ರಂಗಣ್ಣ - ಸರಸೂ ದಂಪತಿಗಳು.

ಎಂಬಲ್ಲಿಗೆ

ಕ್ರಿಸ್ತಶಕ ಎರಡು ಸಾವಿರದ ಒಂದನೇ ಇಸವಿ ಅಕ್ಟೋಬರ್ ತಿಂಗಳಿಂದ ಈವರೆಗೆ ಒಟ್ಟು ಹದಿನೆಂಟು ಪರ್ವಗಳಲ್ಲಿ ಅಪರಂಜೀ ಪ್ರಿಯ ಕನ್ನಡಾಭಿಮಾನಿಗಳಿಗೆ

ಎಸ್ರಾಮ್ಮೂರ್ತಿ

ಎಂಬ ಹುಲು ಮಾನವನು ನಗರ-ಗ್ರಾಮ್ಯ ಮಿಶ್ರ ಕನ್ನಡ ಭಾಷೆಯಲ್ಲಿ ಬ(ಕೊ?)ರೆದ ಹಾಸ್ಯಗಾಥೆ ಗುಂಡಾವತರಣವು ಸಂಪೂರ್ಣವಾದುದು.

(ಕಥೆ ಕಾಲ್ಪನಿಕ - ಜೀವಂತ ವ್ಯಕ್ತಿಗಳಿಗೊಂದು ವೇಳೆ ಸಾಮ್ಯ ಕಂಡುಬಂದಲ್ಲಿ ಮನಸ್ಸಿಗೆ ಹಚ್ಚಿಕೊಳ್ಳದೆ, ಆಕಸ್ಮಿಕವೆಂದು ಮನ್ನಿಸಿಬಿಡಬೇಕೆಂದು ವಿಜ್ಞಾಪನೆ)

ಹಲವಾರು ಕ್ವಿಜ್‌ಗಳು

– ಸೂರಿ ಹಾರ್ದಳ್ಳಿ

ಈ ಕೆಳಕಂಡ ಪ್ರಶ್ನೆಗಳಿಗೆ ಸೂಕ್ತ ಉತ್ತರಗಳನ್ನು ಕೆಳಗಿನವುಗಳಲ್ಲಿ ಆಯ್ಕೆಮಾಡಿ.

1. 'ಗಡಿ ಉಲ್ಲಂಘನೆ ನಿಲ್ಲುವ ತನಕ ಪಾಕಿಸ್ತಾನದೊಡನೆ ಮಾತುಕತೆ ಇಲ್ಲ' ಎಂದವರು ಯಾರು?

- ಪ್ರಧಾನ ಮಂತ್ರಿ ಅಟಲ್ ಬಿಹಾರಿ ವಾಯಪೇಯಿ
- ರಕ್ಷಣಾ ಮಂತ್ರಿ ಜಾರ್ಜ್ ಫರ್ನಾಂಡಿಸ್
- ಗೃಹಮಂತ್ರಿ ಲಾಲ್ ಕೃಷ್ಣ ಆಡ್ವಾನಿ
- ಎಲ್ಲರೂ

2. 'ಇನ್ನು ಮುಂದೆ ಗಡಿಯಾಚೆಗಿನ ಭಯೋತ್ಪಾದನೆಯನ್ನು ಸಹಿಸಿಕೊಳ್ಳಲಾಗುವುದಿಲ್ಲ' ಎಂಬುದನ್ನು ಪ್ರಧಾನ ಮಂತ್ರಿಗಳು ಎಷ್ಟು ಬಾರಿ ಈತನಕ ಹೇಳಿದ್ದಾರೆ?

- ಹತ್ತು ಬಾರಿ
- ನೂರು ಬಾರಿ
- ಸಾವಿರ ಬಾರಿ
- ಲಕ್ಷ ಬಾರಿ ಮೀರಿದೆ

3. 'ಮೂರನೆಯ ದೇಶದ ಮಧ್ಯಸ್ತಿಕೆ ಒಪ್ಪುವುದಿಲ್ಲ' ಎಂದು ಈತನಕ ಒಮ್ಮೆಯೂ ಹೇಳದವರು ಯಾರು?

- ಮಹಾತ್ಮಾ ಗಾಂಧಿ
- ಸೋನಿಯಾ ಗಾಂಧಿ
- ಇಬ್ಬರೂ
- ನೀವು

4. ವೀರಪ್ಪನ್‌ನನ್ನು ಹಿಡಿಯದಿರಲು ಶ್ರಮಿಸಿದ ವಿಶೇಷ ತನಿಖಾದಳದ ಮುಖ್ಯಸ್ಥರು ಎಷ್ಟು ಮಂದಿ?

- ಹತ್ತು
- ನೂರು
- ಸಾವಿರ
- ಯಾವ ಸಂಖ್ಯೆಯೂ ಸರಿಯಾಗಿಲ್ಲ.

5. ಕಾಶ್ಮೀರದಲ್ಲಿ ನಡೆಯುತ್ತಿರುವ ನರಹತ್ಯೆಯನ್ನು ಖಡಾಖಂಡಿತವಾಗಿ ಖಂಡಿಸಿದವರಲ್ಲಿ ಮುಂಚೂಣಿಯಲ್ಲಿ ಇರುವವರು ಯಾರು?

- ಯಶವಂತ ಸಿನ್ಹಾ
- ಬಾಳ್ ಠಾಕ್ರೆ
- ಲಾಲ್‌ಕೃಷ್ಣ ಅದ್ವಾನಿ
- ಯಾರೂ ಇಲ್ಲ

6. ಪೆಟ್ರೋಲ್ ಮತ್ತು ಡೀಸೆಲ್ ಬೆಲೆ ಏರಿಸುವ ಮೊದಲು ಕೇಂದ್ರ ಇಂಧನ ಸಚಿವರು ಎಷ್ಟು ಬಾರಿ 'ಬೆಲೆ ಏರಿಕೆ ಸದ್ಯಕ್ಕಿಲ್ಲ' ಎಂದಿದ್ದಾರೆ?

- ಒಮ್ಮೆಯೂ ಇಲ್ಲ, ಏಕಾ ಏಕಿ ಏರಿಸಿದ್ದಾರೆ
- ನೂರು ಬಾರಿ
- ಪರಿಶೀಲಿಸುತ್ತೇವೆ ಎಂದಿದ್ದಾರೆಯೇ ಹೊರತು ಏರಿಕೆ ಇದೆ ಎಂದಿಲ್ಲ.
- ಗೊತ್ತಿಲ್ಲ.

7. ಹೆಂಗಸರು ತಮ್ಮನ್ನು ರಕ್ಷಿಸಿಕೊಳ್ಳಲು ಉಗುರು ಬೆಳೆಸಬೇಕು ಮತ್ತು ವ್ಯಾನಿಟಿ ಬ್ಯಾಗ್‌ನಲ್ಲಿ ಮೆಣಸಿನ ಪುಡಿ ಕೊಂಡೊಯ್ಯಬೇಕು ಎಂದು ಸಲಹೆ ಮಾಡಿದವರು ಯಾರು?

- ಜಯಲಲಿತಾ
- ಮಮತಾ ಬ್ಯಾನರ್ಜಿ
- ಪೂಲನ್‌ದೇವಿ
- ಸಾಂಗ್ಲಿಯಾನಾ

8. ವೀರಪ್ಪನ್‌ನನ್ನು ಹಿಡಿದೇ ಹಿಡಿಯುತ್ತೇವೆ ಎಂದು ಹೆಚ್ಚು ಬಾರಿ ಹೇಳಿದ ಮುಖ್ಯಮಂತ್ರಿ ಯಾರು?

- ಎಸ್.ಎಂ. ಕೃಷ್ಣ
- ಜೆ. ಜಯಲಲಿತಾ

- ಜೆ.ಹೆಚ್. ಪಟೇಲ್
- ಎಂ. ಕರುಣಾನಿಧಿ

9. ವಿದ್ಯುತ್ ದರ ಏರಿಕೆಯಿಂದ ಹೆಚ್ಚು ಖುಷಿಪಡುವವರು ಯಾರು?
- ರಾತ್ರಿ ಕಳ್ಳರು
- ವಿದ್ಯುತ್ ಸಚಿವರು
- ಗ್ರಾಹಕರು
- ಯಾರೂ ಅಲ್ಲ.

10. '20 ಭಯೋತ್ಪಾದಕರನ್ನು ಒಪ್ಪಿಸಿದ ನಂತರ ಭಾರತದೊಂದಿಗೆ ಮಾತುಕತೆಗೆ ಮುಂದಾಗಿ' ಎಂದು ಯಾವ ವರ್ಷದಲ್ಲಿ ಹೆಚ್ಚು ಬಾರಿ ಹೇಳಲಾಗಿದೆ?
- 1999
- 2000
- 2001
- ಎಲ್ಲಾ ವರ್ಷಗಳೂ

ಮೇಲಿನ ಪ್ರಶ್ನೆಗಳಿಗೆ ಐದಕ್ಕಿಂತ ಹೆಚ್ಚು ಸರಿಯಾದ ಉತ್ತರ ಕೊಟ್ಟವರಿಗೆ ಹತ್ತು ಲಕ್ಷ ರೂಪಾಯಿ ಬೆಲೆಯ ವಿದೇಶೀ ಕಾರನ್ನು ಒರೆಸಲು ಒಂದು ಶುದ್ಧ ಹತ್ತಿಯ ಕರವಸ್ತ್ರವನ್ನು ಉಚಿತವಾಗಿ ಕೊಡಲಾಗುವುದು.

★★★

ಅಕ್ಕಿ ತುಂಬಿದ ಮೂಟೆ ಹೊರಗೆಲ್ಲ ನುಣುಪು
ಅಕ್ಕರೆ ತುಂಬಿದ ಮನ ನಿಜಕ್ಕೂ ಹೊಳಪು
ಅಂಗಾಂಗಗಳು ತುಂಬಿರಬೇಕು ಚೈತನ್ಯ
ನಗೆಗೆ ವಾರಸುದಾರನಾದವನೇ ನಿಜಕ್ಕೂ ಧನ್ಯ


– ಬೇಲೂರು ರಾಮಮೂರ್ತಿ

Statement of Ownership of APARANJI (Kannada Monthly) (See Rules and Form IV)

1.	Place of Publication	: Bangalore
2.	Periodicity of Publication	: Monthly
3.	Printer's Name	: V.R. Nath
	Nationality	: Indian
	Address	: Ravi Graphics 49, 4th Cross, SSI Area Rajaji Nagar, Bangalore - 560 010
4.	Publisher's Name	: Koravanji Aparanji Trust
	Address	No. 36, 6th Main Road Malleswaram, Bangalore - 560 003
5.	Editor's Name	: M. Shivakumar
	Nationality	: Indian
	Address	: 36, 6th Main Road Malleswaram, Bangalore - 560 003
6.	Name and Address of Individuals who own the Paper	: Koravanji Aparanji Trust 36, 6th Main Road Malleswaram, Bangalore - 560 003

I, M. Shivakumar hereby declare that the particulars given above are true to the best of my knowledge and belief.

1-3-2003   M. Shivakumar
Bangalore   (Signature of the Publisher)


STRIKING POWER
Down Hole Hammers
&
Button Bits

Reg. No.: CPMG/KA/BGW-544/2003-05

Mallige Medical Centre

31/32, Crescent Road, Bangalore 560 001.
Phone: 2203333



Mahabodhi Mallige Hospital

T. Mariappa Road, Siddapura,
Jayanagar, Bangalore 560 011.
Phone: 6565678

Fax: 91-80-2265298 E-mail: info@mallige.com
Web: http://www.mallige.com

Printed by V.R NATH for the Publisher KORAVANJI APARANJI TRUST. Published by KORAVANJI APARANI TRUST, 36, 6th Main Road, Malleswaram, Bangalore - 560 003. PRINTED AT RAVI GRAPHICS, 49, 4th Cross, SSI Area, Rajajinagar, Bangalore - 560 010.
Editor : M. SHIVAKUMAR